ಪಕ್ಷದ ನಮ್ಮ ಎಲ್ಲ ಸದಸ್ಯರ ಪರವಾಗಿ ಈ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು: ನಿಮ್ಮ ವಾದಸರಣಿಯನ್ನು ಅವರು ಒಪ್ಪಿಕೊಂಡರು.

ಅಧ್ಯಕ್ಷರು: ಈಗ ನಿಯಮ 69ರ ಮೇರೆಗೆ ಚರ್ಚೆಯನ್ನು ತೆಗೆದುಕೊಳ್ಳೋಣ. ಶ್ರೀಕಾಂತ್ ಕುಲಕರ್ಣಿಯವರೇ ತಾವು ಪ್ರಾರಂಭ ಮಾಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಇವತ್ತು ರೆವಿನ್ಯೂ ಮಿನಿಸ್ಟರ್‌ರವರಿಂದ ಒಂದು ಸ್ಟೇಟ್‌ಮೆಂಟ್ ಕೊಡಿಸುತ್ತೇನೆ ಎಂದು ನಿನ್ನೆ ಹೇಳಿದ್ದಿರಿ.

ಶ್ರೀ ಎಸ್. ಸುರೇಶ್ ಕುಮಾರ್: ನಾಳೆ ಕೊಡುತ್ತಾರೆ.

ಅಧ್ಯಕ್ಷರು: ನಾಳೆ ಕೊಡುತ್ತಾರಂತೆ.

ಶ್ರೀ ಹೆಚ್.ಡಿ. ರೇವಣ್ಣ: ಬಾಲಕೃಷ್ಣರವರ ಒಂದು ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡಿಸಬೇಕಿತ್ತು. ಈಗ ಇಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಿದ್ದಾರೆ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು ಇದ್ದಾರೆ. ದಯಮಾಡಿ ಒಂದು ಹೇಳಿಕೆ ಕೊಡಿಸಬೇಕು. ಇವತ್ತು ಹೇಳಿಕೆ ಕೊಡಿಸುತ್ತೇನೆಂದು ನಿನ್ನೆ ಹೇಳಿದ್ದಿರಿ.

ಅಧ್ಯಕ್ಷರು: ನಿಯಮ 69ರ ಚರ್ಚೆಯಾದ ನಂತರ zero hour ತೆಗೆದುಕೊಂಡು ಆಗ ನಿಮಗೆ ಕೊಡಿಸುತ್ತೇನೆ.

5. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಚರ್ಚೆ

ವಿಷಯ: ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ವಿದ್ಯುತ್ ಪೂರೈಕೆಯಲ್ಲಿ ಆಗುತ್ತಿರುವ ಅವ್ಯವಸ್ಥೆಯ ಬಗ್ಗೆ

ಶ್ರೀ ಶ್ರೀಕಾಂತ ಕುಲಕರ್ಣಿ (ಜಮಖಂಡಿ): ಮಾನ್ಯ ಅಧ್ಯಕ್ಷರೆ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ವಿದ್ಯುತ್ ಸಮಸ್ಯೆ ಬಗ್ಗೆ ಚರ್ಚೆ ಮಾಡಲು ತಾವು ನಿಯಮ 69ರ ಮೇರೆಗೆ ನಮಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕಳೆದ ವರ್ಷ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ತಿನ ಭಾರಿ ಆಭಾವವಾಗಿ ವಿಶೇಷವಾದಂಥ ಸಮಸ್ಯೆಯಾಗಿತ್ತು. ಕರ್ನಾಟಕದಲ್ಲಿ ಮಳೆ ಆಗದೇ ಇದ್ದಾಗ ಜಲಾಧಾರಿತ ವಿದ್ಯುತ್ ಉತ್ಪಾದನೆ ನಿಂತು ಹೋದಂಥ ಸಂದರ್ಭದಲ್ಲಿ, ರಾಜ್ಯದ ಸಮಸ್ತ ಅಭಿವೃದ್ಧಿಯ ಚಿಂತನೆ ಇದ್ದಾಗ, ಸನ್ಮಾನ್ಯ ಯಡಿಯೂರಪ್ಪನವರು ಮತ್ತು ಸನ್ಮಾನ್ಯ ಈಶ್ವರಪ್ಪನವರು ವಿಶೇಷವಾದಂತೆ ಒಂದು ಸಾಹಸವನ್ನು ಮಾಡಿ, ಸುಮಾರು ಮೂರು ಸಾವಿರ

ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ವಿದ್ಯುತ್ತನ್ನು ಖರೀದಿ ಮಾಡಿ, ರಾಜ್ಯದಲ್ಲಿ ಕೆಟ್ಟ ಸನ್ನಿವೇಶ ಬಂದಾಗ ಕೂಡ ವಿದ್ಯುತ್ತನ್ನು ಕೊಟ್ಟು, ಈ ಸಮಸ್ಯೆಗೆ ಸರಿಯಾಗಿ ಸ್ಪಂದನ ನೀಡಿದ್ದಕ್ಕಾಗಿ ಮೊಟ್ಟಮೊದಲಿಗೆ ನಾನು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಸನ್ಮಾನ್ಯ ಇಂಧನ ಮಂತ್ರಿಗಳನ್ನು ಇವತ್ತು ಹಾರ್ದಿಕವಾಗಿ ರೈತರ ಪರವಾಗಿ ಅಭಿನಂದಿಸುತ್ತೇನೆ. ನಮ್ಮ ಉತ್ತರ ಕರ್ನಾಟಕದ Hescom ಭಾಗದಲ್ಲಿ ವಿದ್ಯುತ್ತಿನ ವಿತರಣೆ ವ್ಯವಸ್ಥೆಯಲ್ಲಿ ಸ್ವಲ್ಪ ಮಟ್ಟಿಗೆ ಮಲತಾಯಿ ಧೋರಣೆ ತೋರಿಸುತ್ತಿದ್ದಾರೇನೋ ಎನ್ನುವ ಭಾವನೆ ನಮ್ಮಲ್ಲಿ ಮೂಡಿದೆ. ಏಕೆಂದರೆ, Hescomಗೆ state generation ನಿಂದ 28% ವಿದ್ಯುತ್ ನಿಗದಿಯಾಗಿದ್ದರೂ ಕೂಡ ಇಲ್ಲಿಯವರೆಗೆ ಕೇವಲ 21.35% ವಿದ್ಯುತ್ತನ್ನು ಮಾತ್ರ ಕೊಟ್ಟಿದ್ದಾರೆ. ಇಲ್ಲಿಯ ಅಧಿಕಾರಿಗಳು ಅದರ ಬಗ್ಗೆ ಗಮನ ಕೊಡದೇ, ನಮ್ಮ ಬೇಡಿಕೆಯಂತೆ ವಿದ್ಯುತ್ Hescomಗೆ ಬರದೇ ಇದ್ದ ಪರಿಣಾಮವಾಗಿ, ವಿಶೇಷವಾಗಿ 5 ನದಿಗಳು ಹರಿಯುವಂಥ ಅಖಂಡ ಜಿಲ್ಲೆ ಬಿಜಾಪುರ ಮತ್ತು ಬಾಗಲಕೋಟೆಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ವಿದ್ಯುತ್ತಿನ ಅಭಾವವಾಗಿ, ಪಂಪುಸೆಟ್ಟುಗಳ ಮೂಲಕ ನೀರಾವರಿ ಮಾಡಿಕೊಂಡು ವ್ಯವಸಾಯ ಮಾಡತಕ್ಕಂಥ ರೈತರಿಗೆ ತುಂಬಾ ತೊಂದರೆಯಾಗಿದೆ. ಅಲಾಟ್‌ಮೆಂಟ್ ಆದಂಥ ವಿದ್ಯುತ್ತಿನಲ್ಲೂ ಕೂಡ, ಆಗಾಗ ಇಲ್ಲಿಯ ಹಿರಿಯ ಅಧಿಕಾರಿಗಳು ದೂರವಾಣಿ ಮೂಲಕ ಅಲ್ಲಿಯ ಅಧಿಕಾರಿಗಳಿಗೆ ಒಂದು ಒತ್ತಾಯವನ್ನು ಮಾಡಿ ವಿದ್ಯುತ್ತನ್ನು ಪೂರೈಕೆ ಮಾಡುವಲ್ಲಿ ಅನೇಕ ಕರಾರುಗಳನ್ನು ಹಾಕಿದ್ದರ ಪರಿಣಾಮ ಕಳೆದ ಜೂನ್ ತಿಂಗಳಲ್ಲಿ ನಮಗೆ ಏನು ಅಲಾಟ್‌ಮೆಂಟ್ ಆಗಿತ್ತು. ಅದರಲ್ಲಿ 7%ನಷ್ಟು ವಿದ್ಯುತ್ ನಮಗೆ ಸಿಕ್ಕಿಲ್ಲ.

ಕರ್ನಾಟಕ ರಾಜ್ಯದಲ್ಲಿ ಹಗಲು ಹೊತ್ತು 9 ತಾಸು 3 phase current ಕೊಟ್ಟು ರಾತ್ರಿ 6 ತಾಸು single phase current ಕೊಡತಕ್ಕಂಥ ವ್ಯವಸ್ಥೆ ಇದೆ. ಈ ಭಾಗದ ಜಿಲ್ಲೆಗಳಲ್ಲಿ ಬಹುತೇಕ ಈ ಸಮಸ್ಯೆ ಇಲ್ಲ. ಆದರೆ, ನಮ್ಮ ಭಾಗದಲ್ಲಿ ಈ ವ್ಯವಸ್ಥೆ ಸಂಪೂರ್ಣವಾಗಿ ಜಾರಿಗೆ ಬಂದಿಲ್ಲ. ಆದ್ದರಿಂದ, ಬಹಳ ದೊಡ್ಡ ಪ್ರಮಾಣದಲ್ಲಿ ನಮ್ಮ ನೀರಾವರಿ ಆಧಾರಿತ ರೈತರಿಗೆ ತೊಂದರೆಯಾಗುತ್ತಿದೆ. ನಮ್ಮ ಭಾಗದಲ್ಲಿ ಇವತ್ತು infrastructure ಬಹಳಷ್ಟು develop ಆಗಬೇಕಾಗಿದೆ. ಸಮ್ಮಿಶ್ರ ಸರ್ಕಾರವಿದ್ದಾಗ, ಮಾನ್ಯ ಯಡಿಯೂರಪ್ಪನವರು ರಾಜ್ಯದ ಮುಖ್ಯಮಂತ್ರಿಯಾದ ಮೇಲೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದಾರೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಚಂದ್ರಕಾಂತ ಬೆಲ್ಲದ್‌ರವರು ಅಧ್ಯಕ್ಷರು ಪೀಠವನ್ನಲಂಕರಿಸಿದರು)

ವಿದ್ಯುತ್ ಬಗ್ಗೆ ವಿಶೇಷವಾದಂಥ ಕ್ರಮಗಳನ್ನು ತೆಗೆದುಕೊಂಡು ಆ ವಿದ್ಯುತ್ ವಿತರಣೆಯಲ್ಲಿ ಸಾಕಷ್ಟು ಪರಿಣಾಮಕಾರಿಯಾದ ಬದಲಾವಣೆ ತಂದಿದ್ದಾರೆ. ಆದರೆ, ಇನ್ನೂ ದೊಡ್ಡ ಪ್ರಮಾಣದಲ್ಲಿ ಹೊಸ ಹೊಸ stationಗಳ ಮೂಲಕ ವಿತರಣೆ ಮಾಡತಕ್ಕಂಥ ವ್ಯವಸ್ಥೆಯಲ್ಲಿ ಮಾನ್ಯ ಮಂತ್ರಿಗಳು ಗಮನಹರಿಸಿ ಅದನ್ನು ಮಾಡಿದರೆ ಬಹುಶಃ ನಮ್ಮ ಸಮಸ್ಯೆಗೆ ಒಂದು ಪರಿಹಾರ ಸಿಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮ ಅಖಂಡ ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ಜಮಖಂಡಿ, ಮುಧೋಳ ಈ ಭಾಗದಲ್ಲಿ ಘಟಪ್ರಭಾ, ಕೃಷ್ಣಾ ನದಿ ಹರಿಯುತ್ತಿದ್ದು ಆ ಮೂಲಕ ಅಲ್ಲಿ 1 ಲಕ್ಷದ 75 ಸಾವಿರ pump set ಗಳಿವೆ. ಇಡೀ 7 ಜಿಲ್ಲೆಗಳು ಸೇರಿ ಸುಮಾರು 4 ಲಕ್ಷದಷ್ಟು pump setಗಳಿದ್ದಾಗ, ಈ ಭಾಗದಲ್ಲಿ 1 ಲಕ್ಷದ 75 ಸಾವಿರ pump set ಗಳಿವೆ ಎಂದರೆ ಇದಕ್ಕೆ ದೊಡ್ಡ ಪ್ರಮಾಣದಲ್ಲಿ ವಿದ್ಯುತ್ತಿನ ಬೇಡಿಕೆ ಇದೆ. ಈ ಕೃಷ್ಣಾ ಮತ್ತು ಘಟಪ್ರಭಾ ನದಿ ದಂಡೆ ಮೇಲೆ ಜಮಖಂಡಿಯಲ್ಲಿ ಸುಮಾರು 40 ಸಾವಿರ pump setಗಳಿವೆ. ಜಮಖಂಡಿ ತಾಲ್ಲೂಕಿಗೆ ವಿದ್ಯುತ್ ಒಂದು ಕಡೆ ಮಹಾಲಿಂಗಪುರದ 220 ಕೆ.ವಿ. station ನಿಂದ ಬರುತ್ತದೆ, ಇನ್ನೊಂದು ಕಡೆಗೆ 85 ಕಿ.ಮೀ. ದೂರದಲ್ಲಿರುವ ಬಾಗೇವಾಡಿಯಿಂದ 220 ಕೆ.ವಿ. station ನಿಂದ current ಬರುವುದರಿಂದ ಎಷ್ಟೊಂದು ಪ್ರಮಾಣದಲ್ಲಿ ವಿದ್ಯುತ್ ಬರಬೇಕಾಗಿತ್ತೋ ಆ ಪ್ರಮಾಣದಲ್ಲಿ ವಿದ್ಯುತ್ ಪೂರೈಕೆಯಾಗುತ್ತಿಲ್ಲ. ಅದರಿಂದಾಗಿ ಬಸವನಬಾಗೇವಾಡಿ ಮಹಾಲಿಂಗಪುರದ ಮೇಲೆಯೇ ನಾವು ಅವಲಂಬನೆ ಆದರೆ ನಮ್ಮ ಗ್ರಾಮಾಂತರ ಭಾಗಕ್ಕೆ ಎಷ್ಟು current ಸಿಗಬೇಕೋ ಅಷ್ಟು ಸಿಗುವುದಿಲ್ಲ. ಹಾಗಾಗಿ, ತಕ್ಷಣ ಇನ್ನೂ ಎರಡು 220 ಕೆ.ವಿ. station ಗಳನ್ನು ಮಂಜೂರು ಮಾಡುವುದು ಬಹಳ ಅವಶ್ಯಕ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ಬಗ್ಗೆ ಹಿಂದೆ ಒಂದು ಬೇಡಿಕೆ ಸರ್ಕಾರಕ್ಕೆ ಅರ್ಪಣೆ ಆಗಿತ್ತು. ಅದು ಜಮಖಂಡಿ ಭಾಗದಲ್ಲಿರುವಂಥ ಚಿಕ್ಕಲಕಿ ಕ್ರಾಸ್‌ನ ಹತ್ತಿರ 220 ಕೆ.ವಿ. station ಆಗಬೇಕೆನ್ನುವ ಬೇಡಿಕೆ ಇಟ್ಟು ಸರ್ಕಾರದ ಗಮನ ಸೆಳೆಯಲಾಗಿತ್ತು. ಆದರೆ, ಅದು ಇನ್ನೂ ಮಂಜೂರಾಗಿಲ್ಲ. ಅ ಭಾಗದಲ್ಲಿ ಬಸವನಬಾಗೇವಾಡಿಯಿಂದ ಬರುವ current ಮೇಲೆ ಬಹಳಷ್ಟು voltage dim ಇರುವುದರಿಂದ ಕೃಷಿಗಾಗಲಿ ಅಥವಾ ಬೇರೆ ಯಾವುದೇ ಕೆಲಸಕ್ಕೆ ಆ ವಿದ್ಯುತ್

ದೊರಕುತ್ತಿಲ್ಲ. 85 ಕಿ.ಮೀಟರ್ ದೂರದಿಂದ ಬರುವ ವಿದ್ಯುತ್ ಅದರ ಮೇಲೆ ಸಾವಳಗಿ ಎನ್ನುವಲ್ಲಿ 110 ಕೆ.ವಿ. station ಇದೆ. ತೊದಲಬಾಗಿಯಲ್ಲಿ 110 ಕೆ.ವಿ station ಇದೆ. ಹಿರೇಪಡಸಲಗಿಯಲ್ಲಿ 33 ಕೆ.ವಿ. station ಇದೆ. ಕಲ್‌ಬೀಳಗಿಯಲ್ಲಿ 33 ಕೆ.ವಿ. station ಇದೆ. ಇದಲ್ಲದೆ, ಹೊಸದಾಗಿ ಬಿದರಿ ಗ್ರಾಮದಲ್ಲಿ 33 ಕೆ.ವಿ. station ನ ಕಾರ್ಯ ಪ್ರಾರಂಭವಾಗುತ್ತಿದೆ, ಅದೂ ಕೂಡ ಇನ್ನು 2–3 ತಿಂಗಳಲ್ಲಿ ಮುಕ್ತಾಯವಾಗಬಹುದು. ಈ ರೀತಿ ಇಷ್ಟೊಂದು pressure ಇರುವ ಭಾಗದಲ್ಲಿ ಬಸವನಬಾಗೇವಾಡಿಯಲ್ಲಿ 220 ಕೆ.ವಿ. station ಮೂಲಕ ನೀವು ವಿದ್ಯುತ್ ಪೂರೈಕೆ ಮಾಡಿದರೆ ಬಹುಶಃ ಬಹಳ ದೊಡ್ಡ ಸಮಸ್ಯೆಯಾಗುತ್ತದೆ. ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ. ಇದಕ್ಕೆ ನನ್ನ ಸಲಹೆ ಏನೆಂದರೆ, ಆ ಭಾಗದಲ್ಲಿ ಇನ್ನೂ ಕೂಡ ವಿದ್ಯುತ್ ಬೇಡಿಕೆ ಬಹಳಷ್ಟು ಬರುತ್ತದೆ. ಸನ್ಮಾನ್ಯ ಯಡಿಯೂರಪ್ಪನವರು ಈ ಸರ್ಕಾರದಲ್ಲಿ ವಿಶೇಷವಾದ ಕ್ರಾಂತಿಕಾರಿ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದಾರೆ. ಕೃಷ್ಣಾ ನದಿಯಿಂದ ನೀರನ್ನು ಎತ್ತಿ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳ ನನ್ನ ಕ್ಷೇತ್ರದಲ್ಲಿ 7 ಕೆರೆಗಳು, ಬಿಜಾಪುರ ಜಿಲ್ಲೆಯಲ್ಲಿ 15 ಕೆರೆಗಳು ಮತ್ತು 5 ಬ್ಯಾಂದಾರಗಳನ್ನು ತುಂಬುವ ಬೃಹತ್ ಯೋಜನೆಗೆ ಸುಮಾರು 100 ಕೋಟಿ ರೂಪಾಯಿಗಳಿಗಿಂತಲೂ ಜಾಸ್ತಿ ಹಣವನ್ನು ಮಂಜೂರು ಮಾಡಿ ಈಗಾಗಲೇ ಆ ಕಾರ್ಯ ಪ್ರಾರಂಭವಾಗಿದೆ. ಈ ನೀರನ್ನು ಎತ್ತುವ pump set, ಈ jact well ಕೂಡ ಇದೇ ಭಾಗದಲ್ಲಿ ಆಗುತ್ತದೆ ಮತ್ತು 33 ಕೆ.ವಿ. station ಬೇಕಾಗುತ್ತದೆ. ಇದಲ್ಲದೆ, ಶುದ್ಧವಾದ ಕುಡಿಯುವ ನೀರನ್ನು ಜನರಿಗೆ ಕೊಡಬೇಕೆನ್ನುವ ದೃಷ್ಟಿಯಿಂದ Multi Village Scheme ಏನಿದೆ, ತೊದಲಬಾಗಿ ಮತ್ತು ತುಂಗಳದಲ್ಲಿ 2 scheme ಗೆ ಸರ್ಕಾರ ಮಂಜೂರಾತಿ ಕೊಟ್ಟಿದೆ. ಅದೂ ಕೂಡ ಇಷ್ಟರಲ್ಲಿಯೇ ಕಾರ್ಯಾರಂಭವಾಗುವ ಸ್ಥಿತಿ ಇದೆ. ಹೀಗಾಗಿ ಅಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ವಿದ್ಯುತ್‌ನ ಬೇಡಿಕೆ ಬರುವುದರಿಂದ 220 ಕೆ.ವಿ. station ಚಿಕ್ಕಲಕಿಯಲ್ಲಿ ಮಾಡಿದಾಗ ಮಾತ್ರ ಅದರಿಂದ ನಮಗೆಲ್ಲ ಯಶಸ್ವಿಯಾಗಿ ವಿದ್ಯುತ್ ಸಿಗುತ್ತದೆ ಎನ್ನುವ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇದಲ್ಲದೆ ಕರ್ನಾಟಕ ಸರ್ಕಾರವು ವಿಶೇಷವಾದ ನಿರಂತರ ಜ್ಯೋಗಿ ಎನ್ನುವ ಯೋಜನೆಯನ್ನು ಜಾರಿಗೆ ತರಬೇಕೆಂದು ನಿರ್ಧಾರ ಮಾಡಿದೆ. ಅದನ್ನು ಬಹಳಷ್ಟು ಜನ ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತಿದ್ದಾರೆ. ಬಹುಶಃ ಗುಜರಾತ್ ರಾಜ್ಯದಲ್ಲಿ ಯಾವ ರೀತಿ ನಿರಂತರ ವಿದ್ಯುತ್ ಯೋಜನೆ

ಆಗಬೇಕೆಂದು ಆ ಸರ್ಕಾರ ಮಾಡಿದೆ, ಅದೇ ತರಹ ಕರ್ನಾಟಕದಲ್ಲೂ ಮಾಡುವ ವಿಶೇಷವಾದ ಪ್ರಯತ್ನ ನಡೆದಿದೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕರ್ನಾಟಕ ರಾಜ್ಯದ ತುಂಬಾ ಈ ನಿರಂತರ ಜ್ಯೋತಿ ವಿದ್ಯುತ್ ಯೋಜನೆ ಜಾರಿಗೆ ಬಂದರೆ, ಬಹುಶಃ 1000 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಸಮಾನವಾಗುತ್ತದೆ. ಅನೇಕ ಅಧಿಕಾರಿಗಳನ್ನು, experts ಅನ್ನು ಭೇಟಿ ಕೇಳಿದಾಗ ಅವರು 1000 ಮೆ.ವ್ಯಾ. ವಿದ್ಯುತ್ ಅನ್ನು ಉತ್ಪಾದನೆ ಮಾಡಬೇಕಾದರೆ 5000 ಕೋಟಿ ರೂಪಾಯಿಗಳು ಬೇಕೆಂದು ಹೇಳುತ್ತಾರೆ. ಆದರೆ, ಕರ್ನಾಟಕ ರಾಜ್ಯದ ತುಂಬಾ ಈ ನಿರಂತರ ಜ್ಯೋತಿಯನ್ನು ಜಾರಿಗೆ ತರಬೇಕಾದರೆ 2200 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗುತ್ತದೆ. ಅಂದರೆ, ವಿಶೇಷವಾಗಿ 2200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ನಿರಂತರ ಜ್ಯೋತಿ ಯೋಜನೆ ಜಾರಿಗೆ ಬಂದರೆ ದೊಡ್ಡ ಪ್ರಮಾಣದಲ್ಲಿ ನೀರಾವರಿ ಮಾಡುವ ರೈತರಿಗೆ ಒಂದು ನಿಶ್ಚಿತವಾದ ಸಮಯದಲ್ಲಿ ಕರೆಂಟ್ ಕೊಟ್ಟು ಉಳಿದ ಎಲ್ಲಾ ಜನರಿಗೂ ಕೂಡ ವಿದ್ಯುತ್ ಅನ್ನು ಕೊಡುವಂಥದ್ದು ಇಡೀ ಕರ್ನಾಟಕ ಗ್ರಾಮಾಂತರ ಭಾಗವಿರಬಹುದು, ನಗರವಿರಬಹುದು, 24 ಗಂಟೆ ವಿದ್ಯುತ್ ಅನ್ನು ಪೂರೈಕೆ ಮಾಡತಕ್ಕಂಥ ಸಾಧ್ಯತೆ ಇದೆ. ಇದಕ್ಕಾಗಿ ಸನ್ಮಾನ್ಯ ಇಂಧನ ಮಂತ್ರಿಯವರು ಮತ್ತು ಮುಖ್ಯ ಮಂತ್ರಿಯವರು ಕಾರ್ಯಕ್ರಮ ಹಾಕಿಕೊಂಡಿದ್ದು, ಇದನ್ನು ಆದಷ್ಟು ಬೇಗ ಜಾರಿಗೆ ತರಬೇಕೆನ್ನುವ ಇಚ್ಛೆಯನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಜಮಖಂಡಿ ತಾಲ್ಲೂಕಿನಲ್ಲಿ ಪಂಪ್‌ಸೆಟ್‌ಗಳು ಜಾಸ್ತಿ ಬರುವುದರಿಂದ ಈ ನಿರಂತರ ಜ್ಯೋತಿ ವಿದ್ಯುತ್ ಯೋಜನೆಯನ್ನು ಮೊದಲ ಪ್ರಾಶಸ್ತ್ಯದಲ್ಲಿ ಜಮಖಂಡಿಗೆ ಆದ್ಯತೆಯನ್ನು ಕೊಟ್ಟು ಅದನ್ನು ಜಾರಿಗೆ ತಂದರೆ ದೊಡ್ಡ ರೀತಿಯಲ್ಲಿ ಆ ವ್ಯವಸ್ಥೆಯ ಮೂಲಕ ಆ ಜನರಿಗೆ ಅನುಕೂಲ ಮಾಡಿಕೊಡಲಿಕ್ಕೆ ಸಾಧ್ಯವಿದೆ. ನಮ್ಮ ಭಾಗದಲ್ಲಿ ದೊಡ್ಡ ಪ್ರಮಾಣದಲ್ಲಿ transformer ಗಳು ವಿದ್ಯುತ್ single phase ಇದ್ದಾಗ condenser ಹಾಕಿಕೊಂಡು ಆ ರೈತರು ಪಂಪ್‌ಸೆಟ್ ಅನ್ನು ಪ್ರಾರಂಭ ಮಾಡುವುದರಿಂದ ರೈತರ ಪಂಪ್‌ಸೆಟ್‌ಗಳೂ ಸುಟ್ಟು ಹೋಗುತ್ತವೆ, transformer ಗಳೂ ಸುಟ್ಟು ಹೋಗುತ್ತವೆ. ಆ ಸುಟ್ಟು ಹೋದಂಥ transformer ಗಳನ್ನು ತಕ್ಷಣದಲ್ಲಿಯೇ ಬದಲಾಯಿಸಬೇಕಾಗುತ್ತದೆ. ಆ ಭಾಗದಲ್ಲಿ ಬೇಕಾದಷ್ಟು transformer ಗಳು ಬಂದಿರುವುದರಿಂದ ಒಂದು transformer ಸುಟ್ಟು ಹೋದರೆ ಅದನ್ನು ಬದಲಾಯಿಸಬೇಕಾದರೆ 15–20

ದಿವಸ, ಒಂದು ತಿಂಗಳವರೆಗೆ ಅಧಿಕಾರಿಗಳು ಸಮಯ ತೆಗೆದುಕೊಂಡಾಗ ರೈತರ ಬೆಳೆ ನೀರಿಲ್ಲದೆ ಸಂಪೂರ್ಣ ನಾಶವಾಗುತ್ತದೆ. ಇದನ್ನು ಸರಿ ಮಾಡಬೇಕೆಂದರೆ, ಯಾವುದೇ transformer ಸುಟ್ಟು ತಕ್ಷಣ ಕನಿಷ್ಠ ಒಂದು ವಾರದಲ್ಲಿ ಹೊಸ transformer ಅನ್ನು ಅಳವಡಿಸುವ ಕೆಲಸವಾಗಬೇಕು. ಅದಕ್ಕಾಗಿ ಆ ಭಾಗದಲ್ಲಿ ಬೇಕಾಗುವ transformer ಗಳ survey ಮಾಡಿಸಿ ಅದನ್ನು ಕೊಡಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಪಂಪ್‌ಸೆಟ್‌ಗಳಿಗೆ free ವಿದ್ಯುತ್ ಕೊಡುತ್ತೇವೆಂದು ಸರ್ಕಾರ ಘೋಷಣೆ ಮಾಡಿರುವ ಯೋಜನೆಯಿಂದ ರೈತರಿಗೆ ಸಾಕಷ್ಟು ಲಾಭವಾಗಿದೆ. ಇನ್ನು, ಕೆಲವು ರೈತರು ಹಿಂದಿನ ಬಾಕಿ ಉಳಿಸಿ ಕೊಂಡಿರುತ್ತಾರೆ. ಕೆಲವು ರೈತರಿಗೆ ಅದನ್ನು ತುಂಬಲು ಸಾಧ್ಯವಿಲ್ಲ, ಕೆಲವು ರೈತರಿಗೆ ಅದನ್ನು ತುಂಬಲಿಕ್ಕೆ ಸಾಧ್ಯವಿದೆ. Transformer ಸುಟ್ಟ ಸಂದರ್ಭದಲ್ಲಿ ಕೆಲವು ಅಧಿಕಾರಿಗಳು ನೀವು ನಿಮ್ಮ ಹಿಂದಿನ ಬಿಲ್ ಕಟ್ಟಿದಾಗ ಮಾತ್ರ transformer ಅಳವಡಿಸುತ್ತೇವೆಂದು ಹೇಳುತ್ತಾರೆ. ಹೀಗಾಗಿ, ನಾನು ತಮ್ಮ ಮೂಲಕ ಸನ್ಮಾನ್ಯ ಇಂಧನ ಸಚಿವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬಾಕಿ ಇರುವುದನ್ನು ಕಡ್ಡಾಯವಾಗಿ ವಸೂಲಿ ಮಾಡಬಾರದು. Transformer ಸುಟ್ಟ ತಕ್ಷಣ ಅದನ್ನು ಬದಲಾಯಿಸುವ ವ್ಯವಸ್ಥೆ ಮಾಡಬೇಕೆಂದು ಸನ್ಮಾನ್ಯ ಮಂತ್ರಿಯವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ಕೊಡಬೇಕು. ಒಟ್ಟಾರೆ ಜಮಖಂಡಿಯ ಮಹಾಲಿಂಗಪುರದ ಹತ್ತಿರ ಇನ್ನೊಂದು 220 ಕೆ.ವಿ. station ಅನ್ನು ಹಾಕಬೇಕಾಗುತ್ತದೆ. ಅದೇ ರೀತಿ, ಚಿಕ್ಕಲಿಕೆಯಲ್ಲಿ 220 ಕೆ.ವಿ. station ಮಾಡಬೇಕು. ಬಿಜಾಪುರ ಜಿಲ್ಲೆಯಲ್ಲಿ ಕೂಡ ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ಅವ್ಯವಸ್ಥೆ ಇದೆ. ಆ ಸಮೀಪದ ಬಬಲೇಶ್ವರ ಇರಬಹುದು, ಗೆಣ್ಣೂರು ಇರಬಹುದು, 33 ಮತ್ತು 110 ಕೆ.ವಿ. station ಗಳನ್ನು ಇದೇ ಚಿಕ್ಕಲಿಕೆಯ ಮೂಲಕ ವಿದ್ಯುತ್ supply ಯನ್ನು ಇಲ್ಲಿಂದಲೇ ಕೊಟ್ಟರೆ ಆ ಎರಡೂ ಜಿಲ್ಲೆಗಳಿಗೆ ವಿದ್ಯುತ್ ಸರಬರಾಜು ಮಾಡುವ ವ್ಯವಸ್ಥೆಯಾಗುತ್ತದೆಂದು ಹೇಳುತ್ತೇನೆ. ಈ ಬಗ್ಗೆ ಸರಿಯಾದ ನಿರ್ಧಾರವನ್ನು ಮಾನ್ಯ ಮಂತ್ರಿಯವರು ತೆಗೆದುಕೊಂಡು ನಮ್ಮ ಸಮಸ್ಯೆಗೆ ಶಾಶ್ವತವಾದ ಪರಿಹಾರವನ್ನು ಕೊಡಬೇಕೆಂದು ವಿನಂತಿ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಕೆ. ಬೆಳ್ಳುಬ್ಬಿ (ಬಸವನಬಾಗೇವಾಡಿ): ನಿಯಮ 69ರ ಅಡಿಯಲ್ಲಿ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿರುವ ವಿದ್ಯುತ್ ಆಭಾವದ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಮೊದಲನೆಯದಾಗಿ ತಮಗೆ

ಧನ್ಯವಾದಗಳನ್ನು ಹೇಳುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ ಇವತ್ತು ಹಗಲು ಹೊತ್ತಿನಲ್ಲಿ 2–3 ಗಂಟೆ ಕೂಡ 3 phase ವಿದ್ಯುತ್ ಸರಬರಾಜಾಗುತ್ತಿಲ್ಲ. ಬಿಜಾಪುರ ಮತ್ತು ಬಾಗಲಕೋಟೆಗಳು ವಿಶೇಷವಾಗಿ ಬರಗಾಲದ ಜಿಲ್ಲೆಗಳು. ಅದರಲ್ಲಿಯೂ ವಿಶೇಷವಾಗಿ ನಮ್ಮಲ್ಲಿ ಮುಖ್ಯವಾಗಿ ಬೆಳೆಯುವ ತೋಟಗಾರಿಕೆ ಬೆಳೆ ಉಳ್ಳಾಗಡ್ಡಿಯಾಗಿದೆ. ಆ ಉಳ್ಳಾಗಡ್ಡಿಯನ್ನು ಬೆಳೆಯಲು ನೀರು ಹೆಚ್ಚುಬೇಕು. ಅದಕ್ಕೆ 4 ತಿಂಗಳು ಸರಿಯಾಗಿ ನೀರು ಹರಿಸಿದರೆ ಮಾತ್ರ ಒಳ್ಳೆಯ ಬೆಳೆ ಬರುತ್ತದೆ. ಇಲ್ಲದೇ ಹೋದರೆ, ಆ ಬೆಳೆ ಬೆಳೆದ ರೈತ ಸರಿಯಾದ ಬೆಳೆ ಬರದೇ ನೇಣು ಹಾಕಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅದರ ಜೊತೆಗೆ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಎಷ್ಟು ಈರುಳ್ಳಿ ಬೆಳೆಯುತ್ತಾರೆಂದರೆ, ಬೆಂಗಳೂರಿನ ಮಾರುಕಟ್ಟೆಗೆ 6 ತಿಂಗಳು supply ಮಾಡುವಷ್ಟು ಬೆಳೆಯಲಾಗುತ್ತಿದೆ. ಅಂದರೆ ವಿಶೇಷವಾಗಿ ಬೇಸಿಗೆ ಕಾಲದಲ್ಲಿ ಬೆಳೆಯತಕ್ಕಂಥ ಪೀಕ್ ಆಗಿದೆ. ಇದನ್ನು ಹುಬ್ಬಳ್ಳಿ–ಧಾರವಾಡದಲ್ಲಿ ಮಳೆಗಾದಲ್ಲಿ ಸಾಕಷ್ಟು ಬೆಳೆಯಲಾಗುತ್ತದೆ. ಬೇಸಿಗೆಯಲ್ಲಿ ಈರುಳ್ಳಿ ಬೆಳೆ ಜಾಸ್ತಿ ಬೆಳೆಯುವ ಪ್ರದೇಶ ಯಾವುದೆಂದರೆ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳು. ಆ ಜಿಲ್ಲೆಗಳಲ್ಲಿ ಉಳ್ಳಾಗಡ್ಡಿ ಬೆಳೆಯದಿದ್ದರೆ, ಈಗ ತೊಗರಿ ಬೇಳೆಯ ಕೊರತೆಯಿಂದಾಗಿ ಯಾವ ರೀತಿ ಹಾಹಾಕಾರ ಪ್ರಾರಂಭವಾಗಿದೆ, ಅದೇ ರೀತಿ ಇಡೀ ರಾಜ್ಯಕ್ಕೆ ಈರುಳ್ಳಿ ಕೊರತೆಯಾಗಿ ಹಾಹಾಕಾರ ಶುರುವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಾ, ಅಲ್ಲಿಯ ರೈತರಿಗೆ ಹಗಲು ಹೊತ್ತಿನಲ್ಲಿ ಕನಿಷ್ಠ 8 ಗಂಟೆಯಾದರೂ 3 phase ವಿದ್ಯುತ್ ಕೊಡುವಂಥದ್ದಾಗಬೇಕು. ಇದುವರೆಗೆ ಜಲಾಶಯಗಳು ಖಾಲಿಯಾಗಿದ್ದವು. ಅಲ್ಲಿ ವಿದ್ಯುತ್ ಉತ್ಪಾದನೆಯಾಗುತ್ತಿರಲಿಲ್ಲ. ಇವತ್ತು ಸುದೈವದಿಂದ ಕಳೆದ ಹುಣ್ಣಿಮೆ ದಿವಸ ಸರ್ಕಾರದ ವತಿಯಿಂದ ಮಹದೇಶ್ವರ ದೇವರಿಗೆ ಪೂಜೆ ಮಾಡಿದ ಮೇಲೆ ಈ ಅಮಾವಾಸ್ಯೆಯೊಳಗಾಗಿ ಆಲಮಟ್ಟಿ ಡ್ಯಾಂ ಭರ್ತಿಯಾಗಿದೆ. ಅಲ್ಲಿ ಕೂಡ 270 ಮೆ.ವ್ಯಾ. ವಿದ್ಯುತ್ ಉತ್ಪಾದನೆಯಾಗಲಿಕ್ಕೆ ಪ್ರಾರಂಭವಾಗಿದೆ. ಇದು ಬಹಳ ಸಂತೋಷದ ಸಂಗತಿಯಾಗಿದೆ. ಈ ರಾಜ್ಯದ ನೀರಾವರಿ ಸಲುವಾಗಿ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳ ಸುಮಾರು 3–4 ಲಕ್ಷ ಎಕರೆ ಭೂಮಿಯನ್ನು ಕಳೆದು ಕೊಂಡಿದ್ದೇವೆ. ಆಲಮಟ್ಟಿ ಡ್ಯಾಂನಿಂದ 150 ಗ್ರಾಮಗಳು ಮುಳುಗಡೆಯಾಗಿವೆ. ಇಷ್ಟೆಲ್ಲಾ ತ್ಯಾಗ ಮಾಡಿದರೂ ಕೂಡ, 5 ನದಿ ಇದ್ದರೂ ಕೂಡ ಅಲ್ಲಿಗೆ ಸರಿಯಾಗಿ ಅಲ್ಲಿ ಸರಿಯಾದ ವಿದ್ಯುತ್ ಇಲ್ಲದೇ ರೈತ ಕಣ್ಣೀರು ಹಾಕುವ ಸ್ಥಿತಿ

ನಿರ್ಮಾಣವಾಗಿದೆ. ಅದರ ಜೊತೆಗೆ, ಈ ಸರ್ಕಾರ ಬಂದ ಮೇಲೆ ಸನ್ಮಾನ್ಯ ಮುಖ್ಯಮಂತ್ರಿಯವರಾದ ಯಡಿಯೂರಪ್ಪನವರು ಮತ್ತು ಇಂಧನ ಸಚಿವರಾದ ಕೆ.ಎಸ್. ಈಶ್ವರಪ್ಪನವರು ಹಿಂದಿನ ವಿದ್ಯುತ್ ಕೊರತೆಯನ್ನು ನೀಗಿಸುವ ಸಲುವಾಗಿ ಸಾಕಷ್ಟು ಹೊಸ ಯೋಜನೆಗಳನ್ನು ಪ್ರಾರಂಭಿಸಿದ್ದಾರೆ. ಆದರೆ, ಆ ಯೋಜನೆಗಳು ಮುಗಿಯಬೇಕಾದರೆ, 3–4 ವರ್ಷಗಳು ಬೇಕಾಗುತ್ತದೆ. ನನ್ನ ಕ್ಷೇತ್ರವಾದ ಬಸವನ ಬಾಗೇವಾಡಿಯ ಕೂಡಿಗಿ ಗ್ರಾಮದ ಹತ್ತಿರ 4000 ಮೆ.ವ್ಯಾ. ಉಷ್ಣ ವಿದ್ಯುತ್ ಸ್ಥಾವರ ಮಾಡುವುದಕ್ಕೂ ಸಹ ಆ ಯೋಜನೆ ಬಂದಿದೆ. ಅಲ್ಲಿಯ ರೈತರನ್ನೂ ಸಹ ನಾವು ಮನವೊಲಿಸಿದ್ದೇವೆ. ಈ ಯೋಜನೆಯಾಗಬೇಕು, ಅದರ ಮುಖಾಂತರವಾಗಿ ಬಸವನ ಬಾಗೇವಾಡಿ ತಾಲ್ಲೂಕಿಗೆ ತ್ಯಾಗ ಮಾಡಿರುವ ತಾಲ್ಲೂಕಿಗೆ ತಕ್ಷಣವೇ 24 ಗಂಟೆ ವಿದ್ಯುತ್ ಕೊಡಬೇಕೆಂದು ನಾನು ತಮ್ಮ ಮೂಲಕ ಸನ್ಮಾನ್ಯ ಇಂಧನ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ಬಿಜಾಪುರ ಜಿಲ್ಲೆಯಲ್ಲಿ ಯಾವುದೇ ಕೈಗಾರಿಕೆಗಳಿಲ್ಲ. ಅಲ್ಲಿ ದೊಡ್ಡ ಗೋಳಗುಮ್ಮಟ ಕಟ್ಟಿದ್ದಾರೆ, ಒಂದು ಬಾರಾಕಂಬದ ನಿರ್ಮಾಣವನ್ನು ಅರ್ಧಕ್ಕೆ ಬಿಟ್ಟಿದ್ದಾರೆ. ಬಸವಣ್ಣ ಹುಟ್ಟಿದ ಸ್ಥಳವೆಂದು ಆ ಜಿಲ್ಲೆ ಪ್ರಸಿದ್ಧವಾಗಿದೆ. ಆದರೆ, ಅಲ್ಲಿ ಕೈಗಾರಿಕೆ ಇಲ್ಲ, ನೀರಾವರಿ ಪೂರ್ಣವಾಗಿಲ್ಲ. ಆ ಕೊರತೆ ನೀಗಬೇಕೆಂದರೆ ವಿದ್ಯುತ್ ಬಹಳ ಮುಖ್ಯವಾಗಿ ಬೇಕಾಗಿದೆ. ಬಿಜಾಪುರ ಮತ್ತು ಬಾಗಲಕೋಟೆ ಎರಡೂ ಬೇರೆ ಜಿಲ್ಲೆಗಳಲ್ಲ. ಅಲ್ಲಿಯೂ ಕೂಡ ಎರಡು ದೊಡ್ಡ ಸಾಮ್ರಾಜ್ಯಗಳಾದ ಬಾದಾಮಿಯ ಚಾಲುಕ್ಯರ ರಾಜಧಾನಿಯಾಗಿತ್ತು. ಇನ್ನೊಂದು ಬಿಜಾಪುರ ಅದಿಲ್‌ಶಾಹಿಯವರ ರಾಜಧಾನಿಯಾಗಿತ್ತು. ಹೀಗಿದ್ದರೂ ಕೂಡ, ಇವು ರಾಜ್ಯದಲ್ಲಿಯೇ ಹಿಂದುಳಿದ ಜಿಲ್ಲೆಗಳಾಗಿರುವ ಸಂದರ್ಭದಲ್ಲಿ ತಕ್ಷಣದಲ್ಲಿಯೇ ಸರ್ಕಾರ ಅಲ್ಲಿಗೆ ಹಗಲು ಹೊತ್ತಿನಲ್ಲಿ 8 ತಾಸು 3 phaseನಲ್ಲಿ ವಿದ್ಯುತ್ ಒದಗಿಸಿದರೆ ನಿಶ್ಚಿಂತೆಯಿಂದ ಅಲ್ಲಿಯ ರೈತರು ಬೆಳೆ ಬೆಳೆಯುತ್ತಾರೆ. ವಿಶೇಷವಾಗಿ, ದ್ರಾಕ್ಷಿ ಬೆಳೆಯುವ ವಿಜಾಪುರ ಜಿಲ್ಲೆಯಲ್ಲಿ ಬಾವಿ ಮತ್ತು ಬೋರ್‌ವೆಲ್‌ನಲ್ಲಿ ನೀರಿನ ಪ್ರಮಾಣ ಬಹಳ ಕಡಿಮೆ ಇದೆ. ಆ ನೀರನ್ನು ಅವರು ಹನಿಹನಿಯಾಗಿ ಬಳಸಿಕೊಳ್ಳುತ್ತಾರೆ. ಹೆಚ್ಚು ಕರೆಂಟ್ ಒದಗಿಸಿದರೂ ಸಹ ಅವರು ನೀರು ಇದ್ದಾಗ ಪಂಪ್‌ಸೆಟ್ ಆನ್ ಮಾಡಿಕೊಳ್ಳುತ್ತಾರೆ. ಅದರ ಜೊತೆಗೆ, ನಿರಂತರ ಜ್ಯೋತಿ ಯೋಜನೆಯಲ್ಲಿ ಈಗಾಗಲೇ ಬಸವನ ಬಾಗೇವಾಡಿ ತಾಲ್ಲೂಕನ್ನು ತಾವು ಆರಿಸಿಕೊಂಡಿದ್ದೀರಿ. ಅದರ ಜೊತೆಗೆ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳನ್ನು ಅದರಲ್ಲಿ ಅಳವಡಿಸಿ, ಅಲ್ಲಿ 24 ತಾಸು ವಿದ್ಯುತ್ ಸಿಗುವಂತೆ ಮಾಡಬೇಕೆಂದು ತಮ್ಮ

ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಾ, ಬಸವನ ಬಾಗೇವಾಡಿಯಲ್ಲಿ KEB Division Office ಆಗಬೇಕೆಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಅಲ್ಲಿ 220 ಕೆ.ವಿ. ಸ್ಟೇಷನ್ ಇದೆ. ಅಲ್ಲಿಂದಲೇ 3–4 ಜಿಲ್ಲೆಗಳಿಗೆ ವಿದ್ಯುತ್ ಸರಬರಾಜಾಗುವ ವ್ಯವಸ್ಥೆ ಇದೆ. ಅಲ್ಲಿ ಒಂದು Division Office ಮಾಡಿದರೆ ಒಳ್ಳೆಯದು. ಜೊತೆಗೆ, ಮಲಘಾಣದಲ್ಲಿರುವ 33 ಕೆ.ವಿ. ಸ್ಟೇಷನ್ ಅನ್ನು 110 ಕೆ.ವಿ. ಸ್ಟೇಷನ್ ಮಾಡುವ ಸಲುವಾಗಿ ಮೇಲ್ದರ್ಜೆಗೇರಿಸುವ ಕೆಲಸ ನಡೆಯುತ್ತಿದೆ. ಅದನ್ನು ಶೀಘ್ರವಾಗಿ ಮುಗಿಸಬೇಕೆಂದು ಹೇಳುತ್ತೇನೆ. ಕೊಲ್ಹಾರದಲ್ಲಿ Section Office ತೆರೆಯಬೇಕು. ಜೊತೆಗೆ, ಅಲ್ಲಿ transformer ಗಳ ಸಮಸ್ಯೆ ಬಹಳ ಇದೆ. ಇದು ನನ್ನದೊಂದೇ ಕ್ಷೇತ್ರದಲ್ಲಿ ಅಲ್ಲ, ಇಡೀ ರಾಜ್ಯದಲ್ಲಿ ಇದೆ. Transformer ಸುಟ್ಟು ಹೋಯಿತೆಂದರೆ, ಹೊಸ transformer ಬೇಗ ಸಿಗುವುದಿಲ್ಲ. ಒಂದು TC ಸುಟ್ಟು ಹೋದರೆ 15 ದಿವಸಗಳಾದರೂ ಕರೆಂಟ್ ಇಲ್ಲದೆ ಹಿಟ್ಟು ಬೀಸುವುದಕ್ಕಾಗುವುದಿಲ್ಲ. ಇದಕ್ಕೆ ನನ್ನ ಸಲಹೆ ಏನೆಂದರೆ, ಗ್ರಾಮ ಪಂಚಾಯಿತಿಗಳ ಮುಖಾಂತರ ಆ ಗ್ರಾಮ ಪಂಚಾಯಿತಿಗಳ ಹಣದಲ್ಲಿ ಈಗಾಗಲೇ ನಾನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಜೊತೆ ಈ ಬಗ್ಗೆ ಮಾತನಾಡಿದ್ದೇನೆ, ರಾಜ್ಯದ ತುಂಬಾ 2–3 transformer ಗಳನ್ನು ಖರೀದಿ ಮಾಡುವುದಕ್ಕೆ ಸೂಚನೆ ಕಳುಹಿಸಿದರೆ, ಆ ಸಮಸ್ಯೆ ಬಗೆ ಹರಿಯುತ್ತದೆನ್ನುವ ಮಾತನ್ನು ಹೇಳುತ್ತೇನೆ. ತಕ್ಷಣವೇ ಸುಟ್ಟ transformer ಅನ್ನು ತೆಗೆದು ಹಾಕಿ ಈಗಾಗಲೇ ಖರೀದಿಸಿದ್ದನ್ನು ಜೋಡಿಸಿದರೆ ಅದರಿಂದ 2–3 ತಿಂಗಳು ಉಪಯೋಗ ಮಾಡಿ ಕೊಳ್ಳಲಿಕ್ಕಾಗುತ್ತದೆ. ಗ್ರಾಮ ಪಂಚಾಯಿತಿಗಳ ಫಂಡ್‌ನಲ್ಲಿ transformer ಗಳನ್ನು ಖರೀದಿ ಮಾಡಿ ಇಟ್ಟುಕೊಳ್ಳಬೇಕೆಂದು ಸೂಚನೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿರುವ ವಿದ್ಯುತ್ ಕೊರತೆಯನ್ನು ನೀಗಿಸಲು ತಕ್ಷಣ ಯುದ್ಧೋಪಾದಿಯಲ್ಲಿ ಕಾರ್ಯಾರಂಭಿಸಬೇಕು. ಏಕೆಂದರೆ, ಎಲ್ಲಾ ಜಲಾಶಯಗಳೂ ಭರ್ತಿಯಾಗಿವೆ. ಆಲಮಟ್ಟಿಯಲ್ಲಿ 290 ಮೆ.ವ್ಯಾ. ವಿದ್ಯುತ್ ಉದ್ಪಾದನೆಯಾಗುತ್ತಿದೆ. ಆ ವಿದ್ಯುತ್ ಅನ್ನು ವಿಶೇಷವಾಗಿ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ರೈತರಿಗೆ ಕೊಟ್ಟು ಆ ರೈತರ ಗೋಳನ್ನು ನೀಗಿಸಬೇಕೆಂದು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಟಕಧೋಂಡ ವಿಠ್ಠಲ್ ದೊಂಡಿಬಾ (ನಾಗಠಾಣ): ಬಿಜಾಪುರ ಜಿಲ್ಲೆಗೆ ಅನ್ವರ್ಥ ನಾಮ ಎಂದರೆ ಬರಗಾಲ. ಇವತ್ತು ಬಿಜಾಪುರ ಜಿಲ್ಲೆಯಲ್ಲಿ ಬೇರೆ ಬರದ ಜೊತೆಗೆ ವಿದ್ಯುತ್ ಬರ ಸಹ ಇದೆ. ನಮ್ಮ ಜಿಲ್ಲೆಯ ಆ ಕಡೆ ಭೀಮಾ ನದಿ ದಂಡೆ, ಈ ಕಡೆ ಕೃಷ್ಣಾ ನದಿ ದಂಡೆ ಇದೆ. ಆದರೆ, ಈಗ ನಮ್ಮ ಹಿರಿಯರು ಹೇಳಿದ ಹಾಗೆ, ನಮ್ಮ ಜಿಲ್ಲೆಯಲ್ಲಿ ಪಂಚ ನದಿಗಳಿದ್ದರೂ ನೀರಾವರಿಯಾಗಿಲ್ಲ. ಆದರೆ, ನಿಂಬೆ, ದಾಳಿಂಬೆ, ದ್ರಾಕ್ಷಿ ಇಂಥ Horticulture ಬೆಳೆಗಳನ್ನು ಬಾಳೆ ಸಮೇತ ಬೆಳೆಯುವಂಥ ಸುಪ್ರಸಿದ್ಧವಾದ ಜಿಲ್ಲೆ ಎಂದರೆ ಅದು ನಮ್ಮ ಬಿಜಾಪುರ ಜಿಲ್ಲೆ. ಅಂಥ ಬಿಜಾಪುರ ಜಿಲ್ಲೆ ವಿದ್ಯುತ್ ಅಭಾವದಿಂದಾಗಿ 2001ರಲ್ಲಿ 49,995 ಹೆಕ್ಟೇರ್ horticulture ಬೆಳೆ ಬೆಳೆಯಲಾಗುತ್ತಿತ್ತು. ಆದರೆ, ಇವತ್ತು ವಿದ್ಯುತ್ ಕೊರತೆಯಿಂದ ನಮ್ಮ ಜಿಲ್ಲೆಯಲ್ಲಿ ಎಷ್ಟೊಂದು ಆಘಾತವಾಗಿದೆ ಎಂದರೆ 8,000, 8500 ಹೆಕ್ಟೇರ್‌ನಷ್ಟು ಮಾತ್ರ horticulture ಬೆಳೆಯನ್ನು ಬೆಳೆಯುವ ಪರಿಸ್ಥಿತಿಗೆ ಬಂದದ್ದೇವೆ. ಎರಡೂ ನದಿ ದಂಡೆಗಳ ಮಧ್ಯೆದಲ್ಲಿ ನಮ್ಮ ಜಿಲ್ಲೆಯಿದ್ದರೂ ಸಹ ಕರೆಂಟ್ ಇಲ್ಲದೆ ಆ ಬೆಳೆಗಳೆಲ್ಲ ಒಣಗುತ್ತಿವೆ. ಇವತ್ತು ಬಿಜಾಪುರಕ್ಕೆ ಹಗಲು 2 ತಾಸು, ರಾತ್ರಿ 2 ತಾಸು ಕರೆಂಟ್ ಕೊಡುತ್ತಿದ್ದಾರೆ. Single Phase 6 ತಾಸು ಕೊಟ್ಟರೆ, ಭೀಕರ ಬರಗಾಲ ಇರುವ ಆ ಜಿಲ್ಲೆಯಲ್ಲಿ ದನಕರುಗಳಿಗೂ ಸಹ ಕುಡಿಯಲಿಕ್ಕೆ ನೀರು ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ. ಬಿಜಾಪುರ ಜಿಲ್ಲೆಗೆ 35–45 ವರ್ಷಗಳ ಹಿಂದೆ ವಿದ್ಯುತ್ ಪಡೆದಿದ್ದೇವೆ. ಆದರೆ, ಅದೇ ಹಳೆಯ ವೈರ್, conductor ಎಂದೇನು ಹೇಳುತ್ತೇನೆ, conductor ಎಂದರೆ ಹಳೆಯ ತಂತಿ ಬೇಕಾದಲ್ಲಿ ಕಡಿದು ಬಿದ್ದು ಇವತ್ತು ನನ್ನ ಮತ ಕ್ಷೇತ್ರದ ದೋಣಿ ಬಿ.ಕೆ. ಗ್ರಾಮದಲ್ಲಿ 13 ವಯಸ್ಸಿನ ಇಬ್ಬರು ಹುಡುಗರಾದ ಸಿದ್ರಾಮ ವೀರಪ್ಪ ಕೋಳಿ ಮತ್ತು ವಿನಾಯಕ ಸಿದ್ರಾಮ ಕೋಳಿ ಎಂಬುವರು ದಿನಾಂಕ 6–5–2009ರಂದು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಬಿಜಾಪುರ ಮತ್ತು ಬಾಗಲಕೋಟೆ ಎರಡೂ ಜಿಲ್ಲೆಗಳಲ್ಲಿರುವ ಆ ಹಳೆಯ conductor ಗಳನ್ನು ಬದಲಾವಣೆ ಮಾಡಿ ಹೊಸ ತಂತಿಯನ್ನು ಹಾಕಬೇಕೆಂದು ಸನ್ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಜೊತೆಗೆ, ಪ್ರಾಣ ಕಳೆದುಕೊಂಡಿರುವ ಆ ಇಬ್ಬರು ಹುಡುಗರಿಗೆ ಇನ್ನೊವರೆಗೆ HESCOM ನಿಂದಾಗಲಿ ಅಥವಾ ವಿದ್ಯುತ್ ಇಲಾಖೆಯಿಂದ ಪರಿಹಾರ ಕೊಟ್ಟಿಲ್ಲ. ತಕ್ಷಣ ಪರಿಹಾರ ಕೊಡುವ ವ್ಯವಸ್ಥೆಯಾಗಬೇಕು. ಈಗ ಕೇವಲ ವಿಜಾಪುರ ಜಿಲ್ಲೆಗೆ 15

ಮೆ.ವ್ಯಾ. ವಿದ್ಯುಚ್ಛಕ್ತಿಯನ್ನು ಮಾತ್ರ HESCOM ನವರು ಕೊಡುತ್ತಿದ್ದಾರೆ. ಆದರೆ ನಮಗೆ ಕನಿಷ್ಠ ಆರು ತಾಸು ವಿದ್ಯುತ್ ರೈತರಿಗೆ ಹಗಲು ಕೊಡಬೇಕಾದರೂ ಕನಿಷ್ಠ 40 ಮೆ.ವ್ಯಾ. ವಿದ್ಯುತ್ ಪ್ರತಿ ದಿವಸಬೇಕು. ಮಾನ್ಯ ಸಚಿವರಲ್ಲಿ ನನ್ನ ವಿನಂತಿ ಏನೆಂದರೆ, ಈ ಬರಗಾಲ ಪೀಡಿತ ಜಿಲ್ಲೆಗೆ ವಿದ್ಯುತ್ ಕೊಟ್ಟು ತಾವು ಈ ವಿದ್ಯುತ್ತಿನ ಬರ ನೀಗಿಸಬೇಕು ಜೊತೆಗೆ ನನ್ನ ಕ್ಷೇತ್ರದಲ್ಲಿ ಚಡಚಣ ಸಬ್ ಸ್ಟೇಷನ್ ಇದೆ. ಇಲ್ಲಿ ಆರು ಜನ ಜ್ಯೂನಿಯರ್ ಇಂಜಿನಿಯರ್ಸ್‌ಬೇಕು. ಆದರೆ ಅಲ್ಲಿ ಮೂರು ಜನ ಇಂಜಿನಿಯರ್ಸ್ ಮಾತ್ರ ಇದ್ದಾರೆ. ಸಬ್‌ಸ್ಟೇಷನ್ ನೋಡಿಕೊಳ್ಳುವುದಕ್ಕೆ ಲೈನ್‌ಮೆನ್‌ಗಳು ಅಲ್ಲಿ ಇದ್ದಾರೆ. ಅಂದರೆ ಲೈನ್‌ಮನ್‌ಗಳು ಆ ಸಬ್ ಸ್ಟೇಷನ್ ನೋಡಿಕೊಳ್ಳುತ್ತಾರೆಂದರೆ ಆ ವ್ಯವಸ್ಥೆ ಹೇಗೆ ಆಗುತ್ತದೆ ಎಂಬುದನ್ನು ತಾವು ಸರ್ಕಾರದವರು ಯೋಚನೆ ಮಾಡಿ. ಅಂದರೆ, ಮೂರು ಜನ ಲೈನ್‌ಮೆನ್‌ಗಳು ಶಾಖಾ ವಿದ್ಯುತ್ ಘಟಕ ನೋಡಿಕೊಳ್ಳುತ್ತಾರೆಂದರೆ ಹೇಗೆ? ಶಾಖೆಯನ್ನು ನೋಡಿಕೊಳ್ಳುವ ಇಂಜಿನಿಯರ್ಸ್ ಎಇಇ, ಲೈನ್‌ಮೆನ್‌ಗಳ ಕೊರತೆಯಿದೆ. ಎಲ್ಲೆಲ್ಲಿ ಕೊರತೆಯಿದೆ ಆ ಬಗ್ಗೆ ತಕ್ಷಣ ಮಾಹಿತಿ ತರಿಸಿ ತಾವು ಆ ಕೊರತೆ ನೀಗಿಸಬೇಕು. ಇವತ್ತು ನಮ್ಮಲ್ಲಿ ಸಾವಿರಘೂಟು ಬೋರ್ ಹೊಡೆದರೂ ಸಹಿತ ನೀರು ಬೀಳದ ಸ್ಥಿತಿಯಿದೆ. ಒಬ್ಬ ರೈತ ಹಿಂದೆ 200–300 ಘೂಟು ಬೋರ್ ಹೊಡೆದರೆ ನೀರು ಬರುತ್ತಿತ್ತು. ಆಗ 5 ಹೆಚ್‌ಪಿ ಮೋಟರ್ ಉಪಯೋಗಿಸುತ್ತಿದ್ದ. ಆದರೆ ಇವತ್ತು 1000 ರಿಂದ 1200 ಘೂಟು ಬೋರ್ ಹೊಡೆದು ನೀರು ಎತ್ತಬೇಕಾದರೆ ಸುಮಾರು ಹೆಚ್‌ಪಿ ಮೋಟರ್ ಉಪಯೋಗಿಸ ಬೇಕಾಗುತ್ತದೆ. ಅದರಲ್ಲಿ ನಮ್ಮ ಜಿಲ್ಲೆಯ ವಿಶೇಷತೆ ಏನೆಂದರೆ, ನೀರಿನ ತಳಮಟ್ಟ ಕೆಳಗಡೆ ಹೋಗಿದೆ ಹೀಗಾಗಿ ಡಾರ್ಕ್ ಏರಿಯಾ ಎಂದು ಘೋಷಣೆ ಮಾಡಿದ್ದಾರೆ. ಹೀಗಾಗಿ ಹೊಸದಾಗಿ ವಿದ್ಯುತ್ ಕನೆಕ್ಷನ್ ತೆಗೆದುಕೊಳ್ಳುವುದಕ್ಕೆ ಹೋದರೆ, ಇಲಾಖೆಯವರು ಏನು ಹೇಳುತ್ತಾರೆಂದರೆ, ಇಲ್ಲಿ ಡಾರ್ಕ್ ಏರಿಯಾ ಇರುವುದರಿಂದ ನಿಮಗೆ ವಿದ್ಯುತ್ ಕನೆಕ್ಷನ್ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಅದರ ಪರಿಣಾಮ ಏನಾಗುತ್ತದೆಂದರೆ, ರೈತರು ತಾವು ಬೆಳೆದಂಥ ದಾಳಿಂಬೆ, ದ್ರಾಕ್ಷಿ, ಗಿಡಗಳನ್ನು ಒಣಗಿಸಬಾರದು ಎನ್ನುವ ಉದ್ದೇಶದಿಂದ ದೋ ನಂಬರ್ ಎಂದು ನಾವೇನು ಕರೆಯುತ್ತೇವೆ ಇಲ್ಲೀಗಲ್ ಕನೆಕ್ಷನ್ ಅವರು ತೆಗೆದುಕೊಳ್ಳುತ್ತಾರೆ. ಇದರಿಂದ ಸರಕಾರಕ್ಕೂ ಹಾನಿಯಾಗುತ್ತದೆ ಮತ್ತು ಆ ರೈತರಿಗೂ ಹಾನಿಯಾಗುತ್ತದೆ. ಮಧ್ಯವರ್ತಿಗಳು ಸಾಕಷ್ಟು ಲಂಚದ ಕೆಲಸ ನಡೆಸುತ್ತಾರೆ. ಅದಕ್ಕೆ ಇದನ್ನು ಬಂದ್ ಮಾಡಬೇಕಾದರೆ ಬಿಜಾಪುರ ಜಿಲ್ಲೆಯಲ್ಲಿರುವಂಥ ಡಾರ್ಕ್ ಏರಿಯಾ

ಎನ್ನುವುದನ್ನು ತೆಗೆದೋಡಿಸಬೇಕು. ಉದಾ: ಗೆ ಹೇಳುವುದಾದರೆ, ಹುಕ್ಕೇರಿಯಲ್ಲಿ ವಿದ್ಯುತ್ ಕನೆಕ್ಷನ್‌ಗಾಗಿ ಬೆಳಗ್ಗೆ ಅರ್ಜಿ ಕೊಟ್ಟರೆ ಮಧ್ಯಾಹ್ನ ಅಥವಾ ಸಂಜೆ ಅವರಿಗೆ ಕನೆಕ್ಷನ್ ಕೊಡುತ್ತಾರೆ. ಆ ರೀತಿ ಬಿಜಾಪುರದಲ್ಲಿ ರೈತರಿಗೆ ಕನೆಕ್ಷನ್ ಕೊಡುವಂತಹ ವ್ಯವಸ್ಥೆ ಮಾಡಿ ಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ವಿನಂತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದು ಸವದಿ (ತೇರದಾಳ): ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯಲ್ಲಿರುವ ವಿದ್ಯುತ್ ಸಮಸ್ಯೆಯ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಿದ್ದು, ಇದರಲ್ಲಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಈಗಾಗಲೇ ನಮ್ಮ ಸದಸ್ಯರು ಹೇಳಿದ ಪ್ರಕಾರ, ನಮ್ಮ ಜಿಲ್ಲೆಯಲ್ಲಿ ವಿದ್ಯುತ್ತಿನ ಸಮಸ್ಯೆ ಬಹಳ ಗಂಭೀರವಾಗಿದೆ. ಆದರೆ, ಒಂದು ಸಂತೋಷದ ಸಂಗತಿ. ನಮ್ಮ ಇಂಧನ ಸಚಿವರಾದ ಸನ್ಮಾನ್ಯ ಈಶ್ವರಪ್ಪನವರು ನಾವು ಯಾವಾಗ ಯಾವಾಗ ನಮ್ಮ ಸಮಸ್ಯೆಗಳನ್ನು ತೆಗೆದುಕೊಂಡು ಅವರ ಬಳಿ ಹೋದಾಗ ಅವರು ಅಧಿಕಾರಿಗಳನ್ನು ಕರೆಸಿ ತಕ್ಷಣ ನಮಗೆ ಇದ್ದುದರಲ್ಲಿ ಸಮರ್ಪಕವಾಗಿ ವಿದ್ಯುತ್ ಕೊಡುವಂಥ ವ್ಯವಸ್ಥೆ ಮಾಡಿದ್ದು ನೋಡಿದರೆ ನಾನು ಅವರಿಗೆ ಅಭಿನಂದನೆಗಳನ್ನು ಹೇಳಬಯಸುತ್ತೇನೆ.

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇಂಥ ಕಷ್ಟ ಪರಿಸ್ಥಿತಿಯಲ್ಲೂ ಸಹಿತ ಸಾಧ್ಯವಾದಷ್ಟು ನಿಭಾಯಿಸಿ ನಮ್ಮ ಭಾಗದಲ್ಲೂ ಅನೇಕ ಸ್ಟೇಷನ್‌ಗಳನ್ನು ಮಾಡುವುದರ ಮುಖಾಂತರ ವಿದ್ಯುತ್ತಿನ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ರೈತರ ಹಿತ ಕಾಪಾಡಿದ್ದಾರೆ ಎನ್ನುವ ಮಾತನ್ನು ಬಹಳ ಸಂತೋಷದಿಂದ ಹೇಳುತ್ತೇನೆ. ಮಾನ್ಯ ಈಶ್ವರಪ್ಪನವರಿಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಮೊದಲನೆಯದಾಗಿ ನಾನು ಅಭಿನಂದನೆಗಳನ್ನು ಹೇಳುತ್ತೇನೆ. ಈ ಪರಿಸ್ಥಿತಿ ನೋಡಿದಾಗ ಇಂಥ ವೈಜ್ಞಾನಿಕ ಯುಗದಲ್ಲಿ ಸಹಿತ ನಮ್ಮ ಭಾಗಕ್ಕೆ ಕರೆಂಟಿನ ಕೊರತೆ ಬಂತು ಎಂದು ನಾವು ಆಲೋಚಿಸಿದಾಗ ಇದಕ್ಕೆ ಹೊಣೆಗಾರರು ಹಿಂದಿನ ಸರ್ಕಾರಗಳು ಮುಂದಾಲೋಚನೆಯಿಲ್ಲದೆ ವಿವೇಚನಾರಹಿತ ಆಡಳಿತ ಮಾಡಿದ್ದರ ಪ್ರತಿಫಲವೇ ಇವತ್ತಿನ ಪರಿಸ್ಥಿತಿ ಈ ರಾಜ್ಯಕ್ಕೆ, ರೈತರಿಗೆ ಬಂದಿದೆ ಎಂದು ನಾನು ಬಹಳ ನೇರವಾಗಿ ಆರೋಪ ಮಾಡುತ್ತೇನೆ. ಏಕೆಂದರೆ ನಮ್ಮ ಸರ್ಕಾರದ ಹಾಗೆ ಅವರು ಏನಾದರೂ ನಿರ್ಧಾರ ತೆಗೆದುಕೊಂಡು ರೈತರಿಗೆ ಈ ಸಮಸ್ಯೆ ಬರಬಹುದು ಎಂದು ಮುಂದಾಲೋಚನೆ ಮಾಡಿ, ಮುಂಚಿತವಾಗಿ ಯೋಜನೆಗಳನ್ನು ರೂಪಿಸಿದ್ದರೆ ನಮ್ಮ ರಾಜ್ಯಕ್ಕೆ ಈ ವಿದ್ಯುತ್ತಿನ ಬರ ಬರುತ್ತಿರಲಿಲ್ಲ ಎನ್ನುವಂಥ ಮಾತನ್ನು

ಹೇಳಬಯಸುತ್ತೇನೆ. ಆದರೆ ನಮ್ಮ ಸರ್ಕಾರ ಅಧಿಕಾರ ವಹಿಸಿಕೊಂಡ ತಕ್ಷಣ ಇಂಥ ಭಯಾನಕವಾದ ಸಮಸ್ಯೆ ಈ ರಾಜ್ಯದ ಮೇಲೆ ಎರಗಿದಾಗ ಅದಕ್ಕೆ ನಮ್ಮ ಮುಖ್ಯಮಂತ್ರಿಗಳು, ಇಂಧನ ಸಚಿವರು ಎದೆಗುಂದದೆ, ಬೇರೆ ಬೇರೆ ರಾಜ್ಯಗಳಿಂದ ಹಾಗೂ ಕಂಪನಿಗಳಿಂದ ದುಬಾರಿ ಬೆಲೆಯಲ್ಲಿ ವಿದ್ಯುತ್ ಖರೀದಿಸಿ ಈ ವರ್ಷದ ಬೇಸಿಗೆಯ ಸಮಯದಲ್ಲಿ ವಿದ್ಯುತ್‌ನ್ನು ಪೂರೈಸಿದ್ದಾರೆಂದರೆ ಬಹಳ ಸಂತೋಷದ ಸಂಗತಿ. ಆದರೆ, ವಿರೋಧ ಪಕ್ಷದವರು ಕಾಯುತ್ತಿದ್ದರು. ಯಾವಾಗ ಮಳೆ ಬರಲಿಲ್ಲ ಅವರಿಗೆ ಖುಷಿಯಾಗಿತ್ತು. ಯಾವಾಗ ಕರೆಂಟ್ ಹೋಗುತ್ತಿತ್ತು ಅವರಿಗೆ ಸಂತೋಷವಾಗುತ್ತಿತ್ತು. ಯಾವಾಗ ಬಿಜೆಪಿಗೆ ಜನ ಕಲ್ಲು ಹೊಗೆಯುತ್ತಾರೆಂದು ಕಾಯ್ದುಕೊಂಡು ಕುಳಿತಿದ್ದರು.

ಅಧ್ಯಕ್ಷರು: ಸಿದ್ದು ಸವದಿಯವರೆ, ನೀವು 69ನಲ್ಲಿ ಏನು ವಿಚಾರ ಇದೆ ಅದರ ಬಗ್ಗೆ ಮಾತನಾಡಿ. ಇಲ್ಲಾಂದ್ರೆ ನಾನು ಉತ್ತರ ಕೊಡುವುದಕ್ಕೆ ಈಶ್ವರಪ್ಪನವರನ್ನು ಕರೆಯುತ್ತೇನೆ.

(**ಗೊಂದಲ**)

ಶ್ರೀ ಬಿ. ರಮಾನಾಥ್: ನೀವು ಏನು ಈ ರೀತಿ ಮಾತನಾಡುತ್ತೀರಿ? ಮಳೆ ಬರಲಿಲ್ಲವೆಂದರೆ ನಮಗೆ ಖುಷಿಯಾಗುತ್ತದೆಯೇ? ಬರ ಬಂದರೆ ಖುಷಿಯಾಗುತ್ತದೆಯೇ? ಸರಿಯಾಗಿ ಮಾತನಾಡಿ.

(**ಗೊಂದಲ**)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನೋಡಿ ರೂಲ್ 69ನಲ್ಲಿ ಮಾನ್ಯ ಶ್ರೀಕಾಂತ್ ಕುಲಕರ್ಣಿಯವರು, ಬೆಳ್ಳುಬ್ಬಿಯವರು ಎಲ್ಲರೂ ಸೇರಿ ಏನು ಹೇಳಿದಿರಿ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ವಿದ್ಯುತ್ ಪೂರೈಕೆಯಲ್ಲಿ ಆಗುತ್ತಿರುವ ಅವ್ಯವಸ್ಥೆಯ ವಿಚಾರವಾಗಿ ನೀವು ನಿರ್ದಿಷ್ಟವಾಗಿ ಹೇಳಿ ಬಿಡಿ. ನೋಡ್ರಿ ಈ ರೀತಿ ಮಾಡಿಕೊಂಡು ಹೋದರೆ ಇದಕ್ಕೆ ಕೊನೆಯಿಲ್ಲ. ಈಗ ಶ್ರೀಕಾಂತ್ ಕುಲಕರ್ಣಿಯವರು ಮಾತನಾಡಿದ್ದನ್ನು ತಾವು ಕೇಳಿದಿರಿ ಅಲ್ಲವೆ?

ಶ್ರೀ ಸಿದ್ದು ಸವದಿ: ಕೇಳಿದೆ ಸಾರ್ ನಾನು ಅದನ್ನೆ ಹೇಳುತ್ತಿದ್ದೇನೆ.

ಅಧ್ಯಕ್ಷರು: ನೀವು ಇದೇ ರೀತಿ ಡಿಬೇಟ್ ಮಾಡಿಕೊಂಡು ಹೋಗುವುದಾದರೆ, ಸಭೆ ನಾವು ನಡೆಸಬೇಕೋ ಬೇಡವೋ? ಏನಾದರೂ ಸ್ಪೆಸಿಫಿಕ್ ಆಗಿ ಕೇಳಿಬಿಡಿ. ನೋಡ್ರಿ ಎಲ್ಲರೂ ಎರಡೆರಡು ನಿಮಿಷ ಮಾತನಾಡಿ. ನಾನು ಅವಕಾಶ ಕೊಟ್ಟಿದ್ದೇನೆಂದು ಈ ರೀತಿ ಹೇಳಿದರೆ ಹೇಗೆ?

ಶ್ರೀ ಸಿದ್ದು ಸವದಿ: ನಮ್ಮ ರಾಜ್ಯಕ್ಕೆ ಇಂಥ ದಯನೀಯ ಸ್ಥಿತಿ ಬರಬೇಕಾದರೆ ಏನು ಕಾರಣ ಎನ್ನುವುದನ್ನು ಸ್ವಲ್ಪ ಹೇಳಬೇಕಲ್ಲವೆ?

(ಗೊಂದಲ)

ಅಧ್ಯಕ್ಷರು: ನೀವು ಹೇಳಿ ಅವರು ಉತ್ತರ ಕೊಡುತ್ತಾರೆ, ಸರ್ಕಾರ ಉತ್ತರ ಕೊಡುತ್ತಾರೆ ಬಿಡಿ.

ಶ್ರೀ ಸಿದ್ದು ಸವದಿ: ಅವರ ಮೇಲೆ ಆರೋಪ ಮಾಡಬೇಕೆನ್ನುವ ಉದ್ದೇಶ ಇಲ್ಲ. ಮುಂದೆ ಈ ರೀತಿ ಆಗಬಾರದು ನೆಗ್ಲೆಟ್ ಮಾಡಬಾರದು ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು: ನಿಮಗೆ ಏನು ಬೇಕಾಗಿದೆ?

ಶ್ರೀ ಸಿದ್ದು ಸವದಿ: ಅವರ ಮೇಲೆ ಆರೋಪಿಸುವುದಿಲ್ಲ ಬಿಡಿ.

ಅಧ್ಯಕ್ಷರು: ಅಯಿತು ಬಿಡಿ. ನೀವು ರೂಲ್ 69 ಏಕೆ ತೆಗೆದುಕೊಂಡು ಬರುತ್ತೀರಿ? ನೀವು ಯಾವ ವಿಚಾರಕ್ಕೆ ತಂದಿದ್ದೀರಿ, ನಿಮ್ಮ ಜಿಲ್ಲೆಯ ಪರಿಸ್ಥಿತಿ ಬಗ್ಗೆ ಹೇಳಿ.

ಶ್ರೀ ಸಿದ್ದುಸವದಿ: ವಿಶೇಷವಾಗಿ ನಮ್ಮ ಕ್ಷೇತ್ರಯಿರಬಹುದು, ಬಾಗಲಕೋಟೆ ಜಿಲ್ಲೆಯಿರಬಹುದು, ಬಿಜಾಪುರ ಜಿಲ್ಲೆಯಿರಬಹುದು, ಅದರಲ್ಲೂ ನನ್ನ ಕ್ಷೇತ್ರವಾದ ತೇರದಾಳ ಮತಕ್ಷೇತ್ರ ನೂರಕ್ಕೆ ನೂರರಷ್ಟು ನೀರಾವರಿ ಕ್ಷೇತ್ರಯಿದೆ.

ಅಧ್ಯಕ್ಷರು: ನೋಡಿ ತಮಗೆ ಮತ್ತೊಂದು ವಿಷಯ ಏನೆಂದರೆ, ಅನೇಕ ಮಾನ್ಯ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ರಿಪೀಟ್ ಮಾಡುವುದಕ್ಕೆ ಹೋಗಬೇಡಿ. ಹೊಸ ಪಾಯಿಂಟ್ಸ್ ಇದ್ದರೆ ಹೇಳಿ. ಅಪ್ ಟು ದಿ ಪಾಯಿಂಟ್ ಹೇಳಿ. ಈಗಾಗಲೇ ಸಾಕಷ್ಟು ಹೇಳಿದ್ದಾರೆ.

ಶ್ರೀ ಸಿದ್ದು ಸವದಿ: ನಾನು ಹೊಸ ಪಾಯಿಂಟ್ ಹೇಳುತ್ತೇನೆ. ಇಲ್ಲಿ ಏನು ತಾರತಮ್ಯವಾಗಿದೆ ಎಂದರೆ, ಇಲ್ಲಿ ವಿಶೇಷವಾಗಿ ಯಾರು ಬಲಾಢ್ಯರು ಇದ್ದಾರೆ ಅವರಿಗೆ ಹೆಚ್ಚು ಕರೆಂಟ್‌ನ್ನು ತೆಗೆದುಕೊಳ್ಳುವ ಸ್ಥಿತಿ ಇದೆ. ಏಕೆಂದರೆ, ನಾವು ಬೇರೆ ಬೇರೆ ಜಿಲ್ಲೆಯೊಳಗೆ ನೋಡಿದಾಗ, ನಮ್ಮ ಭಾಗಕ್ಕೆ ಕರೆಂಟ್ ಶಾರ್ಟೇಜ್ ಆದಾಗ, ನಮ್ಮ ಭಾಗಕ್ಕೆ 3 ಫೇಸ್ ಕರೆಂಟ್ ಹಗಲು ಮತ್ತು ರಾತ್ರಿ ವೇಳೆ ಒಂದು ತಾಸು ಕೊಡುತ್ತಿದ್ದರು. ಎರಡು ಅಥವಾ ಮೂರು ತಾಸು ಸಿಂಗಲ್ ಫೇಸ್ ಕೊಡುವಂಥ ವ್ಯವಸ್ಥೆಯಿತ್ತು. ಆ ರೀತಿ ಇರುವಾಗ ಬೇರೆ ಜಿಲ್ಲೆಯಲ್ಲಿ ವಿಚಾರಿಸಿದಾಗ ಅಲ್ಲಿ ಮೂರು, ನಾಲ್ಕು ತಾಸು 3 ಫೇಸ್ ಕೊಡುವಂಥ ವ್ಯವಸ್ಥೆಯಿತ್ತು. ಆ ರೀತಿಯ ತಾರತಮ್ಯ ಅಧಿಕಾರಿಗಳ ಮಟ್ಟದಲ್ಲಿ ಆಗುತ್ತಿದೆ. ಇದನ್ನು ಸಹ ಮಾನ್ಯ ಸಚಿವರು ಸರಿಪಡಿಸಿದ್ದಾರೆ. ಮುಂದಾದರೂ ಸಹ ಈ

ರೀತಿ ಆಗದ ಹಾಗೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ಕೊಡಬೇಕೆಂದು ತಮ್ಮ ಮೂಲಕ ಕೇಳುತ್ತೇನೆ. ಎರಡನೆಯದಾಗಿ ನಿರಂತರ ಜ್ಯೋತಿ ಯೋಜನೆ ಕೇವಲ ನಂಜುಂಡಪ್ಪನವರ ಯೋಜನೆಯ ಪ್ರಕಾರ ಅತಿ ಹಿಂದುಳಿದ ತಾಲ್ಲೂಕುಗಳಿಗೆ ಅಳವಡಿಸಬೇಕೆನ್ನುವ ಯೋಜನೆ ಸರ್ಕಾರ ಹಾಕಿಕೊಂಡಿದೆ ಎನ್ನುವ ಮಾತನ್ನು ನಾನು ಕೇಳಿದ್ದೇನೆ. ಆದರೆ, ವಿಶೇಷವಾಗಿ ನನ್ನ ಮತಕ್ಷೇತ್ರ ನೇಕಾರರ ಸಮುದಾಯವನ್ನು ಹೆಚ್ಚಾಗಿ ಹೊಂದಿರುವ ಮತ ಕ್ಷೇತ್ರವಾಗಿರುವುದರಿಂದ ಗ್ರಾಮ ಗ್ರಾಮಗಳಲ್ಲಿ ವಿದ್ಯುತ್ ಚಾಲಿತ ಮಗ್ಗಗಳನ್ನು ಹಾಕಿಕೊಂಡಿರುವಂಥ ನೇಕಾರರು ಇದ್ದಾರೆ. ಅವರು ಇದರ ಮೇಲೆ ಅವಲಂಬಿತ ವಾಗಿರುವುದರಿಂದ, ಕೇವಲ ಒಂದು, ಎರಡು ತಾಸು 3 ಫೇಸ್ ಕರೆಂಟ್ ಕೊಟ್ಟರೆ ಅವರಿಗೆ ಬದುಕಲಿಕ್ಕೆ ಆಗುವುದಿಲ್ಲ. ಹೀಗಾಗಿ ವಿಶೇಷ ಎಂದು ತಿಳಿದುಕೊಂಡು ನೇಕಾರರು ಇರುವಂಥ ಕ್ಷೇತ್ರಗಳನ್ನು ಮತ್ತು ಆ ಭಾಗವನ್ನು ವಿಶೇಷವಾಗಿ ಕನ್ಸಿಡರ್ ಮಾಡಿ ನಿರಂತರ ಜ್ಯೋತಿ ಯೋಜನೆಯಲ್ಲಿ ನಮ್ಮ ತೇರದಾಳ ಮತಕ್ಷೇತ್ರ ಮತ್ತು ಜಮಖಂಡಿ ತಾಲ್ಲೂಕು ಹಾಗೂ ಮುಧೋಳ ತಾಲ್ಲೂಕುಗಳನ್ನು ತೆಗೆದುಕೊಳ್ಳಬೇಕೆನ್ನುವ ವಿನಂತಿಯನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮಾಡುತ್ತೇನೆ.

ಈಗಾಗಲೇ ನಮ್ಮ ಹಿರಿಯ ಸದಸ್ಯರು ಅನೇಕ ವಿಷಯಗಳ ಬಗ್ಗೆ ಹೇಳಿದ್ದಾರೆ. ಇವತ್ತಿನ ದಿವಸ ಟಿ.ಸಿ. ಗಳದು ಬಹಳಷ್ಟು ತೊಂದರೆ ಇವೆ. ಕುಡಿಯುವ ನೀರಿಗಾಗಿ ಅಳವಡಿಸಿರುವ ಟಿ.ಸಿ. ಗಳು ಅಥವಾ ರೈತರ ಜಮೀನಿನಲ್ಲಿ ಅಳವಡಿಸಿರುವ ಟಿ.ಸಿ. ಗಳು ಸುಟ್ಟು ಹೋದರೆ ಅಲ್ಲಿ ಬೇರೆ ಟಿ.ಸಿ.ಯನ್ನು ಅಳವಡಿಸುವುದಕ್ಕೆ 15 ದಿವಸ ಅಥವಾ 1, 2 ತಿಂಗಳವರೆಗೆ ತಡವಾಗುವ ಸಾಕಷ್ಟು ಉದಾಹರಣೆಗಳಿವೆ. ಈ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇವೆ. ಮತ್ತೆ ಮಾನ್ಯ ಸಚಿವರೂ ಕೂಡ ಸಾಕಷ್ಟು ಸಹಾಯವನ್ನು ಸಹ ಮಾಡಿದ್ದಾರೆ. ಆದರೆ ಪ್ರತಿಸಲ ಇದೇ ರೀತಿಯಾಗ ಬಾರದೆಂದು ಹೇಳುವುದಕ್ಕೆ ಬಯಸುತ್ತೇನೆ. ಅಂದರೆ, ಪ್ರತಿಸಲ ನಾವು ಸರ್ಕಾರದ ಕಡೆ ಓಡಿಬರಬಾರದು. ಆದ್ದರಿಂದ, ದಯವಿಟ್ಟು ಇದಕ್ಕೆ ಏನಾದರೊಂದು ರೂಪರೇಷಗಳನ್ನು ಮಾಡಿ. ಅಂದರೆ, ಟಿ.ಸಿ. ಬರ್ನ್ ಆಗಿ ಇಷ್ಟು ದಿವಸದೊಳಗೆ ಹೊಸ ಟಿ.ಸಿ.ಯನ್ನು ಕೊಡುವಂಥ ಪದ್ಧತಿಯನ್ನು ನೀವು ಅಳವಡಿಸಿಕೊಂಡರೆ ಬಹಳ ಒಳ್ಳೆಯದಾಗುತ್ತದೆ. ಇದರಿಂದ ಅಮಾಯಕ ರೈತರಿಂದ ಸುಲಿಗೆ ಆಗುವುದು ನಿಲ್ಲುತ್ತದೆ. ಬಲಾಢ್ಯ ಇರುವವರು ಎಲ್ಲಿಗಾದರು ಹೋಗಿ ವಸೂಲಿ ಹಚ್ಚಿ, ಬೈದು ಜಗಳ ಮಾಡಿ ಟಿ.ಸಿ. ತರುತ್ತಾರೆ. ಬಾಯಿಲ್ಲದೆ

ಇರುವವರು ಟಿ.ಸಿ. ತರುವುದಕ್ಕೆ ಆಗುವುದಿಲ್ಲ. ಈ ಪರಿಸ್ಥಿತಿಗಳೆಲ್ಲವನ್ನು ನೋಡಿದರೆ ನಿಜವಾಗಿಯೂ ಕೂಡ ಮನಸ್ಸಿಗೆ ನೋವಾಗುತ್ತದೆ. ರೈತರು ಜೀವನ ಪರ್ಯಾಂತ ದುಡಿದಂಥ ಬೆಳೆ ನಾಶವಾದರೆ ಅವರು ಬದುಕುವುದಕ್ಕೂ ಸಹ ಆಗುವುದಿಲ್ಲ. ಆದ್ದರಿಂದ, ಸರ್ಕಾರ ಇದರ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ಮತ್ತೆ ವಿದ್ಯುತ್ ಸರಬರಾಜು ಮಾಡುವ ಸ್ಟೇಷನ್ ಮತ್ತು ಸಬ್ ಸ್ಟೇಷನ್‌ಗಳಲ್ಲಿ ಸುಮಾರು 10–20 ಟಿ.ಸಿ. ಗಳನ್ನು ಸ್ಟಾಂಡ್ ಬೈ ಇಟ್ಟು ಬೇಗನೆ ಸಿಗುವಂತೆ ಮಾಡಬೇಕು. OYTಯಲ್ಲಿ ಅಂದರೆ ಸ್ವಂತ ಖರ್ಚಿನಲ್ಲಿ ಟಿ.ಸಿ. ಯನ್ನು ಅಳವಡಿಸಿಕೊಳ್ಳುವ ಯೋಜನೆ. ಆದರೆ, ಇವತ್ತಿನ ದಿವಸ OYTಯಲ್ಲಿಯೂ ಕೂಡ ಟಿ.ಸಿ. ಯನ್ನು ಕೊಡುವುದು ಬಹಳ ತಡವಾಗುತ್ತಿದೆ. ಸುಮಾರು 6 ತಿಂಗಳಿಂದ ಇಡಿದು 2 ವರ್ಷಗಳವರೆಗೆ ಕ್ಯೂ ನಿಂತುಕೊಳ್ಳುವ ಪರಿಸ್ಥಿತಿ ಇದೆ. ಟಿ.ಸಿ. ಕೊಡುವುದು ತಡವಾದರೆ ಏನಾಗುತ್ತದೆಂದರೆ, ರೈತರು ಕಳವು ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಮತ್ತೆ ಅನಧಿಕೃತ ಕನೆಕ್ಷನ್ ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡುತ್ತಾರೆ. ಆದ್ದರಿಂದ, OYT ಸ್ಕೀಂನಲ್ಲಿ 15 ದಿವಸ ಅಥವಾ 1 ತಿಂಗಳ ಅವಧಿಯಲ್ಲಿ ಕರೆಂಟ್ ಕೊಡುವಂಥ ವ್ಯವಸ್ಥೆ ಆಗಬೇಕು. ಇನ್ನೊಂದು ಮುಖ್ಯವಾದ ಸಂಗತಿ ಏನೆಂದರೆ, ಕರೆಂಟ್‌ನ ಶಾರ್ಟ್‌ಜ್‌ನಿಂದ ರೈತರಲ್ಲಿ ಏನು ಭಾವನೆ ಬರುತ್ತದೆಂದರೆ, ಇವತ್ತಿನ ದಿವಸ ರೈತರ ಜಮೀನೇನು ಹೆಚ್ಚಾಗಿಲ್ಲ ಅಷ್ಟೇ ಇದೆ. ಆದರೆ, ಕರೆಂಟ್ ಕಡಿಮೆ ಅವಧಿ ಕೊಡುವುದರಿಂದ ರೈತರಲ್ಲಿ ಏನು ಭಾವನೆ ಬರುತ್ತದೆಂದರೆ, ನೀವು 12 ಗಂಟೆ ಕರೆಂಟ್ ಕೊಟ್ಟರೆ ಆತ ಒಂದು ಬೋರ್‌ವೆಲ್‌ಗೆ ಒಂದು ಪೈಪ್ ಮತ್ತು ಒಂದು ಮೋಟರ್‌ನ್ನು ಇಟ್ಟುಕೊಳ್ಳುತ್ತಾನೆ. ಆದರೆ, ನೀವು 6 ಗಂಟೆ ಅವಧಿಯವರೆಗೆ ಕರೆಂಟ್ ಕೊಟ್ಟೆ ಎರಡು ಪೈಪ್ ಇಟ್ಟುಕೊಂಡು ಎರಡು ಪಂಪ್‌ಸೆಟ್‌ಗಳನ್ನು ಹಾಕಿ ಕೊಳ್ಳುತ್ತಾನೆ. ಇದರಿಂದ ಇಲಾಖೆಗೂ ಕೂಡ ಹೆಚ್ಚು ಭಾರ ಬೀಳುತ್ತದೆ. ಒಂದು ವೇಳೆ ನೀವು ಏನಾದರು 3 ಗಂಟೆ ಅವಧಿ ಕರೆಂಟ್ ಕೊಟ್ಟರೆ ಆತ ನಾಲ್ಕು ಪೈಪ್‌ಲೈನ್ ಮಾಡಿಕೊಂಡು ನಾಲ್ಕು ಪಂಪ್‌ಸೆಟ್‌ಗಳನ್ನು ಮಾಡಿಕೊಳ್ಳುತ್ತಾನೆ. ಆರ್ಥಿಕ ದೃಷ್ಟಿಯಿಂದ ರೈತರಿಗೂ ಕೂಡ ಭಾರ ಬೀಳುತ್ತದೆ. ಮತ್ತೆ ಇಲಾಖೆಗೂ ಕೂಡ ಭಾರ ಬೀಳುವಂಥ ಪ್ರಸಂಗ ಬೀಳುತ್ತದೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಸರ್ಕಾರಕ್ಕೆ ಮತ್ತು ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಒಂದು ಕೋಟಾವನ್ನು ಸೃಷ್ಟಿ ಮಾಡಿ. ರೈತರ ಜಮೀನು ಎಷ್ಟಿದೆ, ಎಷ್ಟು ನೀರಾವರಿ ಪ್ರದೇಶ ಇದೆ ಮತ್ತು ಆತನಿಗೆ ಎಷ್ಟು

ಕರೆಂಟ್ ಕೊಡಬೇಕೆಂದು ಮತ್ತು ಎಷ್ಟು ನೀರು ಉಪಯೋಗ ಮಾಡಬೇಕೆಂಬುದರ ಬಗ್ಗೆ ಕೋಟಾ ಸೃಷ್ಟಿ ಮಾಡಿದರೆ ರೈತರು ನೆಮ್ಮದಿಯಿಂದ ಬದುಕುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆಂದರೆ ಅನಿಯಮಿತ ಕರೆಂಟ್ ಕೊಡುವುದರಿಂದ ಹಗಲು-ರಾತ್ರಿ ರೈತರು ನದಿ ದಂಡೆಯ ಮೇಲೆ ಅಥವಾ ಬಾವಿ ದಂಡೆಯ ಮೇಲೆ ಕುಳಿತು ಯಾವಾಗ ಕರೆಂಟ್ ಬರುತ್ತದೆಯೋ ಎಂದು ಹುಳ, ಹಾವು ಎಂಬ ಪರಿವಿಲ್ಲದೆ ಕಾಯುತ್ತಾ ಇರುವ ಸ್ಥಿತಿ ಇವತ್ತಿನ ದಿವಸ ರೈತರಿಗೆ ಬಂದಿದೆ. ಅವರಿಗೆ ಶಾಂತಿ ಇಲ್ಲದಂತಾಗಿದೆ. ಆದ್ದರಿಂದ, ದಯವಿಟ್ಟು ಇದಕ್ಕೆ ಏನಾದರು ಒಂದು ಪರಿಹಾರ ಹುಡುಕಿ ರೈತರು ನಿರಂತರವಾಗಿ ನೆಮ್ಮದಿಯ ಜೀವನ ಮಾಡುವುದಕ್ಕೆ ಅನುಕೂಲ ಮಾಡಿ ಕೊಡಬೇಕು. ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಕರ್ನಾಟಕ ರಾಜ್ಯದಲ್ಲಿ ಬಿಜಾಪುರ, ಬಾಗಲಕೋಟೆ, ಮೈಸೂರು, ಕೋಲಾರ ಜಿಲ್ಲೆಯ ರೈತರು ಬೇರೆ ಅಲ್ಲ. ಆದ್ದರಿಂದ, ನೀವು ಯಾರಿಗೂ ಕೂಡ ಬೇಧಭಾವ ಮಾಡತಕ್ಕಂಥ ಕೆಲಸವನ್ನು ಅಧಿಕಾರಿಗಳು ಮಾಡಬಾರದು. ವಿದ್ಯುತ್‌ನ್ನು 1 ಅಥವಾ 10 ಗಂಟೆ ಅವಧಿ ಕೊಡಿ. ಆದರೆ, ಎಲ್ಲರಿಗೂ ಒಂದೇ ರೀತಿಯಲ್ಲಿ ಅಂದರೆ, ಸಿಂಗಲ್ ಫೇಸ್ ಅಥವಾ ಥ್ರೀ ಫೇಸ್ ಕರೆಂಟ್‌ನ್ನು ಒಂದೇ ರೀತಿಯಲ್ಲಿ ಕೊಡುವಂಥ ವ್ಯವಸ್ಥೆ ಈ ರಾಜ್ಯದಲ್ಲಿ ಆಗಬೇಕೆಂದು ಸರ್ಕಾರದವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಪಟ್ಟಣ ಪ್ರದೇಶಗಳಲ್ಲಿ ಇವತ್ತಿನ ದಿವಸ ಸಾಕಷ್ಟು extension area ಬೆಳೆದಿವೆ. ಆದರೆ, ಅಲ್ಲಿ ಕರೆಂಟ್ ಮತ್ತು ಕಂಬದ ವ್ಯವಸ್ಥೆ ಕೂಡ ಇಲ್ಲ. ಹಿಂದೆ ಸಾಕಷ್ಟು ಯೋಜನೆಗಳನ್ನು ತಂದಿದ್ದೀರಿ. ಆದ್ದರಿಂದ, ನಾನು ಹೇಳುವುದೇನೆಂದರೆ, ಆ ಯೋಜನೆಗಳ ಮುಖಾಂತರ ಪಟ್ಟಣ ಪ್ರದೇಶದ ಏರಿಯಾಗಳಲ್ಲಿರುವ ಬಡವರಿಗೆ, ದೀನದಲಿತರಿಗೆ ವಿದ್ಯುತ್‌ನ್ನು ಒದಗಿಸುವುದಕ್ಕೋಸ್ಕರ ಯಾವುದಾದರೊಂದು ಯೋಜನೆಯನ್ನು ಕರ್ನಾಟಕ ಸರ್ಕಾರ ಹಮ್ಮಿಕೊಂಡರೆ ಒಳ್ಳೆಯದಾಗುತ್ತದೆ. ವಿದ್ಯುತ್ ಸೋರುವಿಕೆಯನ್ನು ತಡೆಗಟ್ಟುವುದಕ್ಕೆ ಸಂಬಂಧಪಟ್ಟಂತೆ ಹಿಂದೆ KPTCL ನವರು ಅನೇಕ ಸುಧಾರಣೆಗಳನ್ನು ಹಾಕಿಕೊಂಡಿದ್ದರು. ಆದರೆ, ಇನ್ನು ಸುಧಾರಣೆ ಮಾಡತಕ್ಕಂಥದು ಇದೆ. ಈಗಾಗಲೇ ಮಾನ್ಯ ಕಟಕಧೋಂಡ ವಿಠ್ಠಲ್ ದೊಂಡಿಬಾರವರು ಹೇಳಿದ ಪ್ರಕಾರ ಸುಮಾರು 20 ರಿಂದ 40 ವರ್ಷಗಳ ಹಿಂದೆ ಹಾಕಿದಂಥ ವಿದ್ಯುತ್ ಕಂಬಗಳನ್ನು ಮತ್ತು ವಿದ್ಯುತ್ ತಂತಿಯನ್ನು ಬದಲಾವಣೆ ಮಾಡಿಲ್ಲ. ಹೆಚ್ಚು ಗಾಳಿ ಬೀಸಿದರೆ ಕಂಬ ಮತ್ತು ವಿದ್ಯುತ್ ತಂತಿ ಕಟ್ ಆಗಿ ಬೀಳತಕ್ಕಂಥ ಪರಿಸ್ಥಿತಿ ಇವತ್ತಿನ ದಿವಸ ಇದೆ.

ಇದರಿಂದ ಜೀವ ಹಾನಿ ಮತ್ತು ರೈತರ ಬೆಳೆ ನಾಶವಾಗುತ್ತದೆ. ಇದೇ ರೀತಿಯಾಗಿ ಇನ್ನು ಅನೇಕ ತೊಂದರೆಗಳಾಗುತ್ತವೆ. ಆದ್ದರಿಂದ erection ಮಾಡಿ ಬಹಳ ದಿವಸ ಆಗಿರುವ ಕಡೆ ಬದಲಾವಣೆ ಮಾಡತಕ್ಕಂಥ ಕೆಲಸವನ್ನು ಮಾಡಬೇಕೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ವಿದ್ಯುತ್‌ನಿಂದ ಅನಾಹುತದಿಂದ ಜೀವ ಹಾನಿಯಾದಾಗ ಪರಿಹಾರವನ್ನು ಕೊಡಬೇಕಾಗುತ್ತದೆ. ಇದರಲ್ಲಿಯೂ ಕೂಡ ಕೆಲವು ನ್ಯೂನ್ಯತೆಗಳಿವೆ. ಯಾರದರು ಬಡವರು ಮತ್ತು ದನಕರುಗಳು ಸತ್ತರೆ ಕಛೇರಿಗೆ ದೂರು ಕೊಟ್ಟರೆ ಅವರೇನು ಹೇಳುತ್ತಾರೆಂದರೆ, ಇದು ನಮ್ಮ ತಪ್ಪಿಂದ ಆಗಿಲ್ಲ, ಅಲ್ಲಿನ ತಂತಿ ಮೇಲೆ ಗಿಡ ಬಿದ್ದಿದೆ, ಗಿಡದಿಂದ ತಂತಿ ಕಟ್ ಆಗಿದೆ. ಆದ್ದರಿಂದ ಗಿಡದ ತಪ್ಪೆಂದು ಹೇಳುತ್ತಾರೆ. ಈ ರೀತಿಯಾಗಿ ಬೇರೆ ಬೇರೆ ಕಾರಣಗಳನ್ನು ಹೇಳಿ ಪರಿಹಾರ ಸಿಗಲಾರದ ಹಾಗೆ ಮಾಡುವಂಥ ಪದ್ಧತಿಯಾಗಿದೆ. ಆದರೆ, ಇದಕ್ಕೂ ಕೂಡ ಒಂದು ನಿಯಮಾವಳಿಯನ್ನು ತರಬೇಕು. ಕರೆಂಟ್‌ನಿಂದ ಜೀವ ಹಾನಿಯಾಗಿರುವ ಬಗ್ಗೆ ತಿಳಿದುಕೊಂಡು ನ್ಯಾಯಯುತವಾಗಿ ಮತ್ತು ಮಾನವೀಯತೆ ದೃಷ್ಟಿಯಿಂದ ಬಡವರಿಗೆ ಮತ್ತು ಸತ್ತ ಪ್ರಾಣಿಗಳಿಗೆ ಕಾನೂನು ಚೌಕಟ್ಟಿನೊಳಗೆ ಸಿಗುವಂಥ ಪರಿಹಾರವನ್ನು ಒದಗಿಸಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಸರ್ಕಾರ ಇಂಥ ಒಂದು ಕಷ್ಟಕರ ಪರಿಸ್ಥಿತಿಯಲ್ಲಿಯೂ ಕೂಡ ವಿದ್ಯುತ್ ಕೊಟ್ಟಿದೆ. ಆದ್ದರಿಂದ, ಅವರೇನಾದರು ಹೇಳಲಿ ಆದರೆ, ನಾವು ಅಭಿನಂದನೆಗಳನ್ನು ಹೇಳತಕ್ಕಂಥ ಅವಶ್ಯಕತೆ ಇದೆ. ಇಂಥ ಒಂದು ಪರಿಸ್ಥಿತಿಯಲ್ಲಿ ಯಾರಾದರು ಇದ್ದರೆ ಬಿಟ್ಟು ಓಡಿ ಹೋಗುತ್ತಿದ್ದರು. ಇಂಥ ಒಂದು ಸಂದರ್ಭದಲ್ಲಿ ಮಾನ್ಯ ಈಶ್ವರಪ್ಪನವರು ಗಟ್ಟಿಯಾಗಿ ನಿಂತು ಕೊಂಡು ಬೇರೆ ಬೇರೆ ಕಂಪನಿಗಳಿಂದ ಒಂದು ಯೂನಿಟ್‌ಗೆ 9, 10, 11 ರೂಪಾಯಿ ಕೊಟ್ಟು ವಿದ್ಯುತ್‌ನ್ನು ಖರೀದಿ ಮಾಡಿ ಬೇಸಿಗೆಯಲ್ಲಿ ಕರೆಂಟ್ ಕೊಟ್ಟು ರೈತರನ್ನು ಕಾಪಾಡಿದ್ದಾರೆ. ಈ ರಾಜ್ಯಕ್ಕೆ ವಿದ್ಯುತ್ ಕೊಟ್ಟಿದ್ದಾರೆ. ಆದ್ದರಿಂದ, ಈ ಸದನದ ವತಿಯಿಂದ ವೈಯಕ್ತಿಕವಾಗಿ ಮತ್ತು ನಮ್ಮ ಭಾಗದ ಜನತೆಯ ವತಿಯಿಂದ ಸರ್ಕಾರಕ್ಕೆ ಮತ್ತು ಮಾನ್ಯ ಈಶ್ವರಪ್ಪನವರಿಗೆ ಅಭಿನಂದನೆಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) (ದೇವರಹಿಪ್ಪರಗಿ): ಸನ್ಮಾನ್ಯ ಸಭಾಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ಆಗುತ್ತಿರುವ ಅವ್ಯವಸ್ಥೆಯ ವಿಚಾರವನ್ನು ನಮ್ಮ ಅತ್ಮೀಯ ಶಾಸಕರು ತಂದಿದ್ದಾರೆ. ಈ ವಿಚಾರದ ಬಗ್ಗೆ

ಮಾತನಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಮೊಟ್ಟ ಮೊದಲಿಗೆ ವಂದಿಸುತ್ತೇನೆ. ನನ್ನ ಆತ್ಮೀಯ ಸ್ನೇಹಿತರು ಮತ್ತು ಶಾಸಕ ಮಿತ್ರರಾದಂತಹ ಮಾನ್ಯ ಶ್ರೀಕಾಂತ್ ಕುಲಕರ್ಣಿಯವರು ಮತ್ತು ಹಿರಿಯರಾದಂಥ ಸನ್ಮಾನ್ಯ ಬೆಳ್ಳುಬ್ಬಿಯವರು ಹಾಗೂ ಮಾನ್ಯ ಕಟಕಧೋಂಡ ವಿಠ್ಠಲ್ ದೊಂಡಿಬಾರವರು ಮತ್ತು ಈಗ ತಾನೆ ಮಾತನಾಡಿದಂಥ ಮಾನ್ಯ ಸಿದ್ದು ಸವದಿಯವರು ಅನೇಕ ವಿಚಾರಗಳನ್ನು ಹೇಳಿದ್ದಾರೆ.

ಅಧ್ಯಕ್ಷರು: ಮಾನ್ಯ ಪಾಟೀಲ್‌ರವರೆ, ಇದು ಭಾಷಣ ಅಲ್ಲ. ಆದ್ದರಿಂದ, ತಾವು ನೇರವಾಗಿ ವಿಷಯಕ್ಕೆ ಬನ್ನಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ಅವರುಗಳು ಹೇಳಿರುವ ವಿಚಾರಗಳಿಗೆ ಸಂಪೂರ್ಣವಾಗಿ ಅಲ್ಲದಿದ್ದರೂ ಸ್ವಲ್ಪ ಮಟ್ಟಿನ ನನ್ನ ಒಮ್ಮತದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ರೈತರಿಗೆ ಉಚಿತವಾಗಿ ವಿದ್ಯುತ್ ಕೊಡುತ್ತೇವೆಂದು ಹೇಳಿ ಈ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ಆಡಳಿತಕ್ಕೆ ಬಂದಿದೆ. ಆದರೆ, ಈ ಸರ್ಕಾರ ಆಡಳಿತಕ್ಕೆ ಬಂದ ತಕ್ಷಣ ಏನು ಮಾಡಿದರೆಂದರೆ, ಬಹುತೇಕ ಎಲ್ಲರಿಗೂ ವಿದ್ಯುತ್ ಅನ್ನು ನಿಲ್ಲಿಸುವಂತಹ ಕೆಲಸವನ್ನು ಮಾಡಿದರು. ಇದು ರೈತರ ಪರವಾಗಿ ಈ ಸರ್ಕಾರ ಮಾಡಿದಂಥ ಒಂದು ದೊಡ್ಡ ಸಾಧನೆ ಎಂದು ನಾವು ಹೇಳಬೇಕಾಗುತ್ತದೆ. ನಾನು ನೇರವಾಗಿ ವಿಷಯಕ್ಕೆ ಬರುತ್ತೇನೆ. ನನ್ನ ಜಿಲ್ಲೆಯಲ್ಲಿ ಕರೆಂಟ್ ಇಲ್ಲವೆಂದು ಹೇಳುವುದು ಬಹಳ ಸೂಕ್ತವೆಂದು ನನಗನ್ನಿಸುತ್ತದೆ. ಇವತ್ತಿನ ದಿವಸ ಬಹಳ ಜನ ಸ್ನೇಹಿತರು ವಿದ್ಯುತ್‌ನ ಅವ್ಯವಸ್ಥೆಯ ವಿಚಾರದಲ್ಲಿ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಎಲ್ಲರೂ ಕೂಡ ಮಾನ್ಯ ಸಚಿವರನ್ನು ಅಭಿನಂದಿಸಿದ್ದಾರೆ. ಅವರು ಆಡಳಿತ ಪಕ್ಷದಲ್ಲಿರುವುದು ಹೇಳುವುದಕ್ಕೆ ಕಷ್ಟವಾಗಬಹುದು. ಆದರೆ, ನನ್ನ ಆತ್ಮೀಯ ಶಾಸಕರ ಅಂತರಾಳದ ಮಾತನ್ನು ನಾನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಅವಳಿ 34 ಜಿಲ್ಲೆಯಲ್ಲಿ ಬಹುತೇಕ ಕರೆಂಟ್ ಇಲ್ಲ. ನಾಲ್ಕು ತಿಂಗಳ ಕಾಲ ಕಗ್ಗತ್ತಲೆಯಲ್ಲಿ ನಾವು ಇದ್ದೇವೆಂಬ ಸತ್ಯವನ್ನು ಇವತ್ತಿನ ದಿವಸ ಸದನಕ್ಕೆ ಅನಿವಾರ್ಯವಾಗಿ ತಿಳಿಸಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿಯೂ ಕೂಡ ಕರೆಂಟ್ ಉತ್ಪಾದನೆ ಮಾಡಲಾಗುತ್ತದೆ. ಮಾನ್ಯ ಸಿದ್ದು ಸವದಿಯವರು ಮಾತನಾಡುವಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ಅದೇನೆಂದರೆ, ಹಿಂದಿನ ಸರ್ಕಾರಗಳು ಮಾಡಿರುವಂಥ ತಪ್ಪಿನಿಂದ ಇವತ್ತು ನಾವು ಕತ್ತಲೆಯಲ್ಲಿದ್ದೇವೆಂದು ಹೇಳಿದರು. ಈ ಸಂದರ್ಭದಲ್ಲಿ ನಾನು ಅವರಿಗೆ ಹೇಳುವುದೇನೆಂದರೆ, ಈ ರಾಜ್ಯದಲ್ಲಿರತಕ್ಕಂಥ ಜಲ ವಿದ್ಯುತ್ ಸ್ಥಾವರಗಳನ್ನು ಮತ್ತು ಬಳ್ಳಾರಿ,

ರಾಯಚೂರಿನಲ್ಲಿರುವ ಎಲ್ಲಾ ವಿದ್ಯುತ್ ಸ್ಥಾವರಗಳನ್ನು ಸ್ಥಾಪನೆ ಮಾಡಿದ್ದು ಕಾಂಗ್ರೆಸ್ ಸರ್ಕಾರವೆಂಬ ಸತ್ಯವನ್ನು ತಾವು ಅರ್ಥ ಮಾಡಿಕೊಳ್ಳಬೇಕೆಂಬ ಮಾತನ್ನು ನಾನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಮಾನ್ಯ ಪಾಟೀಲ್‌ರವರೆ ನಾನು ಹೇಳುವುದೇನೆಂದರೆ, ಈ ರೀತಿಯಾಗಿ ಮಾತನಾಡಿದರೆ ಇದೇ ವಾದ ವಿವಾದಗಳು ಆಗುತ್ತವೆ. ಆದ್ದರಿಂದ, ನಾನು ಇದಕ್ಕೆಲ್ಲಾ allow ಮಾಡುವುದಿಲ್ಲ. ನೇರವಾಗಿ ವಿಷಯ ಮಾತನಾಡಿ ಎಂದು ನಾನು ಅವರಿಗೂ ಕೂಡ ಹೇಳಿದ್ದೇನೆ. ಮತ್ತು ನಿಮಗೂ ಕೂಡ ಹೇಳುತ್ತಿದ್ದೇನೆ. ನೀವು ರಾಜಕೀಯ ಭಾಷಣ ಮಾಡುವುದಾದರೆ, ನಿಯಮ 69ರ ಅಡಿಯಲ್ಲಿ ನಾನು ಅವಕಾಶ ಕೊಡುವುದಿಲ್ಲ. ನೀವಿಬ್ಬರು ರಾಜಕೀಯ ಭಾಷಣ ಮಾಡುವುದಾದರೆ ನಾನು ಅವಕಾಶ ಕೊಡುವುದಿಲ್ಲ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ಅವರು ತಪ್ಪು ಮಾಹಿತಿ ಕೊಟ್ಟಿರುವುದರ ಬಗ್ಗೆ ನಾನು ಸ್ಪಷ್ಟಪಡಿಸುತ್ತಿದ್ದೇನಷ್ಟೆ.

ಅಧ್ಯಕ್ಷರು: ನೀವು ನೇರವಾಗಿ ವಿಷಯಕ್ಕೆ ಬನ್ನಿ.

ಶ್ರೀ ಎ.ಎಸ್. ಪಾಟೀಲ (ನಡಹಳ್ಳಿ): ಮಾನ್ಯ ಅಧ್ಯಕ್ಷರೆ, ಏಕೆಂದರೆ, ಆಡಳಿತ ಪಕ್ಷದ ಒಬ್ಬ ಶಾಸಕ ಮಿತ್ರರು ಆ ವಿಷಯವನ್ನು ಎತ್ತಿದ್ದರಿಂದ ನಾನು ಉತ್ತರವನ್ನು ಕೊಡಬೇಕಾಯಿತು. ಅದರಲ್ಲಿ ಬಹಳ ಮುಖ್ಯವಾಗಿ ಇರತಕ್ಕಂಥದ್ದು ನಮ್ಮ ಆತ್ಮೀಯರಾಗಿರತಕ್ಕಂಥ ಮಾನ್ಯ ಸಚಿವರು ಹಿಂದೆ ನಮ್ಮ ಜಿಲ್ಲೆಗೆ ಉಸ್ತುವಾರಿ ಸಚಿವರು ಕೂಡ ಆಗಿದ್ದರು. ನಮ್ಮ ಜಿಲ್ಲೆಯನ್ನು ಬಹಳ ಅರಿತುಕೊಂಡಿದ್ದಾರೆ. ಅವರಿಗೆಲ್ಲಾ ಚೆನ್ನಾಗಿ ಗೊತ್ತಿದೆ. ಅಲ್ಲಿ ಪರಿಸ್ಥಿತಿ ಏನಿದೆ ಎಂದು ಗೊತ್ತಿದೆ. ಆದರೆ ಏಕೋ ಗೊತ್ತಿಲ್ಲ ಇಂಧನ ಸಚಿವರಾದ ಮೇಲೆ ನಮ್ಮ ಜಿಲ್ಲೆಗೆ ಶಾಪ ಕೊಡುತ್ತಿದ್ದಾರೆನ್ನುವ ಒಂದು ಭಾವನೆ ಬರುತ್ತಿದೆ. ಕಾರಣ ಏನೆಂದರೆ, ಬೇರೆ ಕಡೆಗೆ ನೀವು 3–6 ಗಂಟೆ ತ್ರೀಫೇಸ್ ಕರೆಂಟ್‌ನ್ನು ಕೊಟ್ಟರೆ, ವಿಶೇಷವಾಗಿ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗೆ ಕೇವಲ ಎರಡು ತಾಸು ಅದರಲ್ಲಿಯೂ ಕೂಡ ಫುಲ್ ಕರೆಂಟ್ ಇರುವುದು 45 ನಿಮಿಷ ಮಾತ್ರ. ಇದು ಬಹಳಷ್ಟು ನನ್ನ ಆತ್ಮೀಯ ಸ್ನೇಹಿತರಿಗೆ ಗೊತ್ತಿದೆ. ಇದಕ್ಕೆ ಕಾರಣವೇನೆಂದರೆ, [illegible] ಮುಖ್ಯವಾಗಿ ಇರತಕ್ಕಂಥದ್ದು 45–50 ವರ್ಷಗಳ ಹಿಂದೆ ಈ [illegible]ನ್ನು ಏನು ಹಾಕಿದ್ದಾರೆ, ಅದನ್ನು ಚೇಂಜ್ ಮಾಡುವುದಕ್ಕೆ [illegible]ಪಾದಿಯಲ್ಲಿ ಈ ಸರ್ಕಾರ ಒಂದು ತೀರ್ಮಾನ ತೆಗೆದುಕೊಳ್ಳ ಬೇ[illegible]ಥ ಅವಶ್ಯಕತೆ ನಮ್ಮ ಜಿಲ್ಲೆಯಲ್ಲಿ ಇದೆ ಎನ್ನತಕ್ಕಂಥ ಮಾತನ್ನು ಮೊಟ್ಟ

ಮೊದಲನೆಯ ಸಲಹೆ ಎಂದು ಇಟ್ಟಿರುತ್ತೇನೆ. ಎರಡನೆಯದಾಗಿ, ಟ್ರಾನ್ಸ್‌ಫಾರ್ಮರ್‌ಗಳು ಬಹುಶ ಇವತ್ತು ಒಂದು ತಿಂಗಳಲ್ಲಿ ಎರಡು ತಿಂಗಳಾದರೂ ಕೂಡ ಕುಡಿಯುವ ನೀರಿನ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟರೂ ಕೂಡ ಇವತ್ತು ಪ್ರತಿನಿತ್ಯ ಶಾಸಕರಾದ ನಮ್ಮ ಕೆಲಸ ಏನಾಗಿದೆ ಎಂದರೆ, ಪ್ರತಿನಿತ್ಯ ತಮ್ಮ ಇಲಾಖೆಗೆ ಫೋನ್ ಮಾಡುವುದು ನಮಗೆ ಒಂದು ದೊಡ್ಡ ಕೆಲಸ ಆಗಿದೆ. ಪ್ರತಿನಿತ್ಯವೂ ಕೂಡ ಇವತ್ತು ನಾವು ಒಂದು ದಿನ ಫೋನ್ ಮಾಡಿದರೆ ಸಾಕಾಗುವುದಿಲ್ಲ. ಪ್ರತಿನಿತ್ಯವೂ ನಾವು ಫೋನ್ ಮಾಡುತ್ತಿರಬೇಕು. ಏಕೆಂದರೆ, ಟಿ.ಸಿ. ಗಳ ಸಮಸ್ಯೆ ಅಷ್ಟೊಂದಾಗಿದೆ. ವಿಶೇಷವಾಗಿ ಕುಡಿಯುವ ನೀರಿಗೆ, ಇನ್ನು ರೈತರಿಗೆ ಟಿ.ಸಿ, ಕೊಡುವುದು ಬಹಳ ದೂರದ ಮಾತಾಯಿತು. ಇದಕ್ಕೆ ಕಾರಣ ಏನು? ಇವತ್ತು ಟಿ.ಸಿ. ಗಳನ್ನು ರಿಪೇರಿ ಮಾಡುವುದಕ್ಕೆ ಕಾಂಟ್ರಾಕ್ಟ್ ಕೊಟ್ಟಿದ್ದೀರಿ. ಅದು ನಮ್ಮ ಜಿಲ್ಲೆಯ ಬಿಜಾಪುರದ ಒಂದು ಟಿ.ಸಿ. ರಿಪೇರಿ ಸೆಂಟರ್ ಇರಬಹುದು. ಇಂಡಿಯಲ್ಲಿ ಇರತಕ್ಕಂಥದ್ದು ಇರಬಹುದು. ಅಲ್ಲಿ ಏನಾಗಿದೆ ಎಂದರೆ, ಕಾಂಟ್ರಾಕ್ಟರಗಳಿಗೆ ಸರ್ಕಾರದಿಂದ ಹಣವನ್ನು ಬಿಡುಗಡೆ ಮಾಡಿಲ್ಲ ಎನ್ನತಕ್ಕಂಥ ಮಾತನ್ನು ಇವತ್ತು ಅಲ್ಲಿರತ್ಕಂಥ ರಿಪೇರಿ ಸೆಂಟರ್‌ದವರು ಹೇಳುತ್ತಾರೆ. ಅವರಿಗೆ ಒಂದು ದಿನಕ್ಕೆ 20–30 ಟಿ.ಸಿ. ಗಳನ್ನು ರಿಪೇರಿ ಮಾಡುವ ಕೆಪಾಸಿಟಿ ಇದ್ದರು ಕೂಡ ಅವರು ಟಿ.ಸಿ. ಗಳನ್ನು ರಿಪೇರಿ ಮಾಡುವುದಕ್ಕೆ ತಯಾರಿಲ್ಲ. ಏಕೆಂದರೆ, ಅವರು ಹೇಳುತ್ತಾರೆ. ಸರ್ಕಾರದಿಂದ ಕೋಟ್ಯಾಂತರ ರೂ.ಗಳು ಬರುವುದು ಬಾಕಿ ಇದೆ, ಅದಕ್ಕಾಗಿ ನಾವು ಈ ರೀತಿಯಾಗಿ ಟಿ.ಸಿ.ಗಳನ್ನು ರಿಪೇರಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಒಂದು ದಿವಸಕ್ಕೆ 3–4 ಟಿ.ಸಿ.ಗಳನ್ನು ರಿಪೇರಿ ಮಾಡುತ್ತಾರೆ. ಆ ಟಿ.ಸಿ. ಗಳು ಸುಡತಕ್ಕಂಥ ರೇಸಿಯೋ ಮತ್ತು ರಿಪೇರಿ ಮಾಡಿ ಕೊಡತಕ್ಕಂಥ ರೇಸಿಯೋದಲ್ಲಿ ಅಜಗಜಾಂತರವಾದ ವ್ಯತ್ಯಾಸವಿದೆ. ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು, ಬಹುಶ ಈ ಸದನದಲ್ಲಿ ಇದ್ದಾರೆಂದು ಅಂದುಕೊಂಡಿದ್ದೇನೆ. ನಾವು ಕೂಡ ಇದರ ಬಗ್ಗೆ ಒಂದು ಸಲ ಮೀಟಿಂಗ್‌ನಲ್ಲಿ ವಿಶೇಷವಾಗಿ ಕೇಳಿದ್ದೆವು. ಅದರ ಬಗ್ಗೆ ಚರ್ಚೆ ಮಾಡಿದಾಗ ಅಲ್ಲಿರತಕ್ಕಂತ ಅಧಿಕಾರಿಗಳು 10–11 ದಿವಸದಲ್ಲಿ ಟಿ.ಸಿ.ಗಳನ್ನು ರಿಪೇರಿ ಮಾಡಿಕೊಡುತ್ತೇವೆ ಎಂದು ಮಾತು ಕೊಟ್ಟರು ಕೂಡ ಇವತ್ತಿಗೆ ಒಂದುವರೆ ತಿಂಗಳಾದರೂ ಕೂಡ drinking water supply ಮಾಡತಕ್ಕಂಥ ಟಿ.ಸಿ.ಗಳನ್ನು ಕೊಡುವುದಕ್ಕೆ ಈ ಸರ್ಕಾರಕ್ಕೆ ಆಗುತ್ತಿಲ್ಲ ಎನ್ನತಕ್ಕಂಥದ್ದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಯಲ್ಲಿ ಇವತ್ತು ರೈತರಿಗೆ ಪಂಪ್‌ಸೆಟ್‌ಗಳಿಗೆ ಇರುವ ಟಿ.ಸಿ. ಗಳು ಸುಟ್ಟು

ಹೋಗುತ್ತವೆ ಅಥವಾ ಅವರಿಗೆ ಹೊಸ ಟಿ.ಸಿ.ಗಳು ಬೇಕಾಗುತ್ತದೆ. ಅದನ್ನು ಕೊಡುವುದಕ್ಕೆ ಬಹುಶ ಮೂರು ತಿಂಗಳು ಬೇಕಾಗುತ್ತದೆ. ನಮ್ಮಲ್ಲಿ ದ್ರಾಕ್ಷಿ ಮತ್ತು ಬಾಳೆ, ನಿಂಬೆಯ ಹೆಚ್ಚು ತೋಟಗಾರಿಕೆ ಬೆಳೆ ಬೆಳೆಯತಕ್ಕಂಥ ರೈತರು ಇದ್ದಾರೆ, ಇವತ್ತು ಅವರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ರೈತರು ಬದುಕಿಗೆ ಒಂದು ತೊಂದರೆಯಾಗುತ್ತಿದೆ. ಆ ಒಂದು ಕಾರಣಕ್ಕಾಗಿ ಸನ್ಮಾನ್ಯ ಸಚಿವರು, ವಿಶೇಷವಾಗಿ ಬರಗಾಲದಿಂದ ಬಳಲುತ್ತಿರುವ ನಮ್ಮ ಜಿಲ್ಲೆಗೆ ಪಂಪ್‌ಸೆಟ್ ಮುಖಾಂತರ ಕುಡಿಯುವ ನೀರು ಇರಬಹುದು, ತೋಟಗಾರಿಕೆಗೆ ಇರಬಹುದು. ಇದಕ್ಕೆ ಬೇಕಾಗಿರುವಂಥ ಟ್ರಾನ್ಸ್‌ಫಾರ್ಮರ್‌ಗಳು ಇವೆ, ಪ್ರತಿ ಜಿಲ್ಲೆಗೆ ಕನಿಷ್ಟ ಅಡಿಷನಲ್ ಆಗಿ 100 ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಟ್ಟರೆ ಮಾತ್ರ ಈ ಸಮಸ್ಯೆಗೆ ಸ್ವಲ್ಪ ಮಟ್ಟಿಗೆ ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಕೊನೆಯದಾಗಿ ಒಂದು ಮಾತನ್ನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಹಿರಿಯ ಶಾಸಕರಾದಂಥ ಬೆಳ್ಳುಬ್ಬಿಯವರು ಮಾತನಾಡುತ್ತಾ ಕೂಡಗಿ ವಿದ್ಯುತ್ ಸ್ಥಾವರ್‌ದ ಬಗ್ಗೆ ನಮ್ಮ ರೈತರು ಅದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಅದಕ್ಕಾಗಿ ನಮ್ಮ ಬಸವನ ಬಾಗೇವಾಡಿ ತಾಲ್ಲೂಕಿಗೆ 24 ಗಂಟೆಗಳ ಕಾಲ ಉಚಿತವಾಗಿ ಕರೆಂಟ್‌ನ್ನು ಕೊಡಬೇಕು ಎನ್ನುವಂಥ ಮಾತನ್ನು ಅವರು ಹೇಳಿದರು. ಸನ್ಮಾನ್ಯ ಸಚಿವರಲ್ಲಿ ನಾನು ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಈ ಸರ್ಕಾರಕ್ಕೂ ಕೂಡ ಗೊತ್ತಿದೆ. ಬಿಜಾಪುರ ಜಿಲ್ಲೆಯ ಜನ ನಾವು ಭೂಮಿಯನ್ನು ಕಳೆದುಕೊಂಡು ಎಲ್ಲರಿಗೂ ನೀರನ್ನು ಕೊಟ್ಟಿರುತ್ತೇವೆ. ಆದರೆ ನಾವು ಮಾತ್ರ ಇವತ್ತಿಗೂ ಕೂಡ ಕುಡಿಯುವುದಕ್ಕೆ ನೀರು ಇಲ್ಲದೆ ಬಾಯಿ ಬಡಿದುಕೊಳ್ಳುವಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಇವತ್ತು ನಮ್ಮ ಜಿಲ್ಲೆಯಲ್ಲಿ 4000 ಮೆಗಾವ್ಯಾಟ್ ವಿದ್ಯುತ್ ಸ್ಥಾಪನೆಗೆ ತಾವೇನು ಚಿಂತನೆ ಮಾಡುತ್ತಿದ್ದೀರಿ, ಮತ್ತೆ ಅಲ್ಲಿ ನಾವು ಭೂಮಿಯನ್ನು ಕಳೆದುಕೊಳ್ಳುತ್ತಿದ್ದೇವೆ. ಮತ್ತೆ ಅಲ್ಲಿರತಕ್ಕಂಥ ಪರಿಸರ ಮಾಲಿನ್ಯಕ್ಕೆ ನಾವು ಒಳಗಾಗುತ್ತಿದ್ದೇವೆ. ಇವತ್ತಿನವರೆಗೂ ಕೂಡ ಇದರ ಬಗ್ಗೆ ಈ ಸರ್ಕಾರ ಬಂದ ಮೇಲೆ ಒಂದು ಸ್ಪಷ್ಟವಾದಂಥ ಅಲ್ಲಿರತಕ್ಕಂಥ ಜನ ಪ್ರತಿನಿಧಿಗಳು ಆಗಲಿ, ರೈತರನ್ನಾಗಲಿ ಕರೆದು ಆ ಒಂದು ವಿದ್ಯುತ್ ಸ್ಥಾಪನೆ ಬಗ್ಗೆಯಾಗಲಿ, ಅದರಿಂದ ರೈತರ ಮೇಲೆ ಯಾವ ರೀತಿಯ ಪರಿಣಾಮವಾಗುತ್ತದೆ, ಅಲ್ಲಿ ಏನು ತೊಂದರೆಗಳಾಗುತ್ತವೆ, ಅದನ್ನು ಯಾವ ರೀತಿಯಾಗಿ ಸರ್ಕಾರ ಮುಂದೆ ರೈತರಿಗೆ ಸುತ್ತಮುತ್ತಲಿನ ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಯಾವ ರೀತಿಯಾಗಿ ನಾವು ನಿರ್ವಹಣೆ ಮಾಡುತ್ತೇವೆ ಎನ್ನುವುದರ ಬಗ್ಗೆ ಒಂದೇ

ಒಂದು ಜನಪ್ರತಿನಿಧಿಗಳ ಸಭೆಯನ್ನು ಕೂಡ ಕರೆದಿಲ್ಲವೆನ್ನುವಂಥ ಮಾತನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ, ನಮಗೆ ನೋವಾಗುತ್ತಿದೆ. ನಾವು ಅದೇ ಜಿಲ್ಲೆಯವರಾಗಿದ್ದರೂ ಕೂಡ ಸುತ್ತಮುತ್ತಲು ಇರತಕ್ಕಂಥ ನಮ್ಮ ಜನರು ಕೇಳತಕ್ಕಂಥ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕಾಗಿದ್ದರೆ, ಇವತ್ತು ನಮ್ಮ ಸರ್ಕಾರದ ನಿರ್ಧಾರ ಏನು? ಅನೇಕ ಜನ ಅಲ್ಲಿ ಸುತ್ತಮುತ್ತ ತೋಟಗಾರಿಕೆ ಮಾಡತಕ್ಕಂಥ ರೈತರು ಇದ್ದಾರೆ. ಅವರನ್ನು ನೀವು ಯಾವ ರೀತಿಯಾಗಿ ಕಾಪಾಡುತ್ತೀರಿ ಎನ್ನುವುದನ್ನು ಇವತ್ತು ಜವಾಬ್ದಾರಿಯನ್ನು ಸರ್ಕಾರದವರು ಹೊರಬೇಕಾಗುತ್ತದೆ. ಅದರ ಬಗ್ಗೆ ಜಿಲ್ಲೆಯ ಪ್ರತಿನಿಧಿಗಳನ್ನು ತಕ್ಷಣ ಕರೆದು ಸಭೆಯನ್ನು ಮಾಡಬೇಕು ಎನ್ನತಕ್ಕಂಥ ಒಂದು ಸಲಹೆಯನ್ನು ತಮಗೆ ಕೊಡುತ್ತೇನೆ. ಇದರ ಜೊತೆಗೆ, ತಾವೇನು 24 ಗಂಟೆ ಬಸವನಬಾಗೇವಾಡಿಗೆ ಉಚಿತವಾಗಿ ಕರೆಂಟ್ ಕೊಡಬೇಕು ಎನ್ನತಕ್ಕಂಥ ಮಾತನ್ನು ಸನ್ಮಾನ್ಯ ಬೆಳ್ಳುಬ್ಬಿಯವರು ಹೇಳಿದ್ದಾರೆ. ಅದಕ್ಕೆ ಬಹುಶ ರಾಜ್ಯ ಮತ್ತು ಕೇಂದ್ರದ ಮಧ್ಯೆ ಇರತಕ್ಕಂಥ ವಿಚಾರ ಇರುವುದರಿಂದ ಕೇವಲ ಒಂದು ತಾಲ್ಲೂಕು ಅಥವಾ ಒಂದು ಜಿಲ್ಲೆಗೆ ಸೀಮಿತವಾಗಿ ನಾವು ಉಚಿತವಾಗಿ 24 ಗಂಟೆ ಕರೆಂಟ್ ಕೇಳುವುದು ಎಷ್ಟು ಉಚಿತ ಎನ್ನುವುದು ನನ್ನ ಒಂದು ವಿಚಾರದಲ್ಲಿ ಅವಶ್ಯಕ ಎನ್ನುವುದು ನನಗೆ ಗೊತ್ತಿಲ್ಲ. ಅದಕ್ಕೆ ಈ ಸರ್ಕಾರ ಒಪ್ಪಿಗೆ ಕೊಡುವುದಾದರೆ ನಾನು ಬಹಳ ಸಂತೋಷಪಡುತ್ತೇನೆ. ಬಿಜಾಪುರ ಜಿಲ್ಲೆಯ ಜನ ನಾವು ನೀರಿಗಾಗಿ ಭೂಮಿಯನ್ನು ಕಳೆದುಕೊಂಡಿದ್ದೇವೆ. ವಿದ್ಯುತ್ ಸ್ಥಾಪನೆ ಮಾಡುವುದಕ್ಕೋಸ್ಕರ ನಾವು ಇವತ್ತು ಭೂಮಿಯನ್ನು ಕೊಡುತ್ತಿದ್ದೇವೆ. ಅದಕ್ಕೆ ಇಡೀ ಜಿಲ್ಲೆಗೆ ತಾವು 24 ಗಂಟೆ ಕರೆಂಟ್‌ನ್ನು ಕೊಡುವುದರ ಮುಖಾಂತರವಾಗಿ ಈ ಸರ್ಕಾರ ನಿರ್ಧಾರವನ್ನು ತೆಗೆದುಕೊಂಡರೆ, ಅದನ್ನು ಸ್ವಾಗತಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಮತ್ತೊಮ್ಮೆ ಈ ಜಿಲ್ಲೆಯ ರೈತರನ್ನು ಕಗ್ಗತ್ತಲೆಯಲ್ಲಿ ಮುಳುಗಿಸಿರತಕ್ಕಂಥ ಈ ಸರ್ಕಾರ ಮತ್ತು ಮಾನ್ಯ ಇಂಧನ ಸಚಿವರು, ಇನ್ನು ಮೇಲಾದರೂ ಕೂಡ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯ ರೈತರಿಗೆ ನ್ಯಾಯವನ್ನು ಕೊಡುವಂಥ ರೀತಿಯಲ್ಲಿ ಕನಿಷ್ಟ 6 ಗಂಟೆಗಳ ಕಾಲ ಸತತವಾದ ವಿದ್ಯುತ್‌ನ್ನು ಕೊಡಬೇಕೆನ್ನುವ ಒಂದು ಒತ್ತಾಯವನ್ನು ಇಲ್ಲಿ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಅಪ್ಪಾಸಾಹೇಬ (ಅಪ್ಪು) ಪಟ್ಟಣಶೆಟ್ಟಿ (ಬಿಜಾಪುರ): ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿದ್ಯುತ್ತಿನ ವಿಷಯವಾಗಿ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯ

ವಿಶೇಷವಾಗಿ ಎಲ್ಲರೂ ಮಾತನಾಡಿದ್ದಾರೆ. ಇವತ್ತು ಎಲ್ಲರೂ ಹೇಳಿದ ಹಾಗೆ, ನಮ್ಮ ಜಿಲ್ಲೆಗೆ ಹೆಚ್ಚಿದ ಒಂದು ಸೌಕರ್ಯವನ್ನು ಕೊಡಬೇಕು. ಏಕೆಂದರೆ, ವಿದ್ಯುತ್ ಸ್ಥಾವರ್‌ದ ಘಟಕದ ಇವತ್ತು ಕೂಡಗಿಯಲ್ಲಿ ಆಗಿಸುತ್ತಿರುವುದರಿಂದ, ಇದರ ಬಗ್ಗೆ ಹಿರಿಯ ಸದಸ್ಯರಾದ ಬೆಳ್ಳುಬ್ಬಿಯವರು ಹೇಳಿದರು. ವಿಶೇಷವಾಗಿ ಕೊಡಿ ಎಂದು ಕೇಳಿದ್ದಾರೆ, ಅವರು ಉಚಿತವಾಗಿ ಎಂದು ಕೇಳಿರುವುದಿಲ್ಲ. ಅವರು ನಿರಂತರವಾಗಿ 24 ಗಂಟೆಗಳ ಕಾಲ ವಿದ್ಯುತ್ ಕೊಡಿ ಎಂದು ಹೇಳಿದ್ದಾರೆ, ಅದರ ಬಗ್ಗೆ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸದಸ್ಯರು ಮಾತನಾಡುವಾಗ ನಾಲ್ಕು ತಿಂಗಳು ಕತ್ತಲೆಯಲ್ಲಿ ನಮ್ಮ ಬಿಜಾಪುರ ಜಿಲ್ಲೆ ಇತ್ತು ಎನ್ನುವುದನ್ನು ಹೇಳಿದರು. ಇದು ಅಪಾರ್ಥವಾಗುತ್ತದೆ, ಏಕೆಂದರೆ ಇವತ್ತು ಸದನಕ್ಕೆ ನಾವು ಸರಿಯಾದ ವಿಷಯವನ್ನು ಹೇಳಬೇಕಾಗುತ್ತದೆ. ನಮ್ಮ ಜಿಲ್ಲೆಗೆ ಹೆಚ್ಚಿನ ಒಂದು ಸೌಲಭ್ಯ ಕೊಡಬೇಕು ಎನ್ನುವುದರ ಬಗ್ಗೆ ಆಗ್ರಹ ಇದೆ ಎನ್ನುವುದನ್ನು ಮಾನ್ಯ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇವೆ. ಕಳೆದ ಬಾರಿ ಇದ್ದಂತಹ ಒಂದು ಸಮಯದಲ್ಲಿ ಹೆಚ್ಚಿನ ಒಂದು ವಿದ್ಯುತ್‌ನ್ನು ಕೊಡುವಂಥ ದುಸ್ಥಿತಿ ರಾಜ್ಯದಲ್ಲಿ ಆವರಿಸಿತ್ತು. ಆ ಸಮಯದಲ್ಲಿಯೇ ಎಷ್ಟು ವಿದ್ಯುತ್ ಕೊಡಬೇಕು ಅಷ್ಟು ಪ್ರಯತ್ನವನ್ನು ನಮ್ಮ ಜಿಲ್ಲೆಗೆ ಮಾಡಲಾಗಿದೆ ಮತ್ತು ಟಿ.ಸಿ.ಗಳನ್ನು ಕೂಡ ಕೊಡುವಂಥ ಒಂದು ಪ್ರಯತ್ನವನ್ನು ಮಾಡಲಾಗಿದೆ. ಸನ್ಮಾನ್ಯ ಇಂಧನ ಸಚಿವರು ಹಿಂದೆ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದಗಲೂ ಕೂಡ ಆ ವಿಷಯವನ್ನು ಸಾಕಷ್ಟು ಮನಗಂಡಿದ್ದಾರೆ. ಆ ಸಂದರ್ಭದಲ್ಲಿ ಕೂಡ ನಮ್ಮ ಜಿಲ್ಲೆಯಲ್ಲಿ ಬೇಕಾದರೆ, ಮಾನ್ಯ ಎ.ಎಸ್.ಪಾಟೀಲ್ ರವರು ಜಿಲ್ಲಾ ಪಂಚಾಯತಿಯಲ್ಲಿ ಕೇಳಬಹುದು. ಆಗ ಇಂಧನ ಸಚಿವರು ಹೆಚ್ಚು ವಿದ್ಯುತ್‌ನ್ನು ಪೂರೈಕೆ ಮಾಡುವ ಒಂದು ವಿಚಾರದಲ್ಲಿ ಕಳೆದ ಬಾರಿ ಅವರು ಉಸ್ತುವಾರಿ ಸಚಿವರಾಗಿದ್ದಾಗ ಮಾಡಿದ್ದರು. ಈಗಲೂ ಕೂಡ ನಮಗೆ ವಿಶ್ವಾಸ ಇದೆ. ನಮ್ಮ ಜಿಲ್ಲೆಗೆ ಇನ್ನು ಹೆಚ್ಚು ಸೌಕರ್ಯವನ್ನು ಕೊಡುವಂಥ ಒಂದು ಪ್ರಯತ್ನ ಆಗುತ್ತದೆ. ಬೋರ್‌ವೆಲ್ ಮೇಲೆ ತೋಟಗಾರಿಕೆ ಬೆಳೆಯ ರೈತರು ಅವಲಂಬಿತವಾಗಿರುವ ಜಿಲ್ಲೆಯಾಗಿರುವುದರಿಂದ ಇನ್ನು ಹೆಚ್ಚಿನ ಒಂದು ಸೌಲಭ್ಯಗಳನ್ನು ನಮ್ಮ ಜಿಲ್ಲೆಯಲ್ಲಿ ಹಿಂದೆ 220 ಕೆ.ವಿ. ಸ್ಟೇಷನ್‌ಗಳು ಬಹಳ ಇರಲಿಲ್ಲ. ಎರಡು 220 ಕೆ.ವಿ. ಸ್ಟೇಷನ್‌ಗಳನ್ನು, ಮೂರು 110 ಕೆ.ವಿ. ಸ್ಟೇಷನ್‌ಗಳನ್ನು ಮತ್ತು 33 ಕೆ.ವಿ. ಸ್ಟೇಷನ್‌ಗಳನ್ನು ಕಳೆದ ಅವಧಿಯಲ್ಲಿ ಅದನ್ನು ಮಾಡಿ ಎಲ್ಲ ಕಾರ್ಯವನ್ನು ನೆರವೇರಿಸಲು ಪ್ರಾರಂಭವಾಗಿದೆ. ನನ್ನ ವಿನಂತಿ ಕೂಡ ಇದೆ, ಬರುವಂಥ ದಿವಸಗಳಲ್ಲಿ ಆಲಮಟ್ಟಿ ಡ್ಯಾಂ ಸಲುವಾಗಿ ನಮ್ಮ

ಭೂಮಿಯನ್ನು ಯಾವ ರೀತಿ ತ್ಯಾಗ ಮಾಡಿದ್ದೇವೆ, ಈ ಒಂದು ಕೂಡಗಿ ವಿದ್ಯುತ್ ಸ್ಥಾವರಕ್ಕೂ ಕೂಡ ಭೂಮಿಯನ್ನು ಕೊಡುತ್ತಿದ್ದೇವೆ. ಆದ್ದರಿಂದ ವಿಶೇಷವಾದ ಸೌಲಭ್ಯವನ್ನು ಬಿಜಾಪುರ ಜಿಲ್ಲೆಗೆ ಕೊಡಬೇಕು ಎನ್ನುವಂಥದ್ದನ್ನು ಮಾನ್ಯ ಸಚಿವರಿಗೆ ಮನವಿಯನ್ನು ಮಾಡಿ ಬರುವಂಥ ದಿವಸಗಳಲ್ಲಿ ಏನು ದುಸ್ಥಿತಿಯಲ್ಲಿ ಕೂಡ ಹಿಂದೆ ಕರೆಂಟ್‌ನ್ನು ಕೊಟ್ಟಿರುತ್ತಾರೆ. ಬಿಜಾಪುರ ಜಿಲ್ಲೆ 24 ಗಂಟೆ ಕರೆಂಟ್ ಇಲ್ಲದೆ ಕತ್ತಲೆಯಲ್ಲಿ ಮುಳುಗಿರುವುದಿಲ್ಲ. ಕೆಲವೊಂದು ಕಡೆಗಳಲ್ಲಿ ತೊಂದರೆಯಾಗಿದೆ. ಆದರೂ ಕೂಡ ಕರೆಂಟ್‌ನ್ನು ಕೊಡುವಂತಹ ಸಂದರ್ಭದಲ್ಲಿ ಕೊಡಲಾಗಿದೆ. ಬರುವ ದಿನಗಳಲ್ಲಿ ಬಾಗಲಕೋಟೆ ಹಾಗೂ ಬಿಜಾಪುರ ಜಿಲ್ಲೆಗಳಿಗೆ ಆದ್ಯತೆಯನ್ನು ಕೊಟ್ಟು ಈ ಜಿಲ್ಲೆಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿ, ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು): ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಕಳೆದ ಬೇಸಿಗೆಯಲ್ಲಿ ನಗರ ಪ್ರದೇಶಗಳಿಗೆ ದಿನದ 24 ಗಂಟೆ ಹಾಗೂ ಗ್ರಾಮೀಣ ಪ್ರದೇಶಗಳಿಗೆ ದಿನವಹಿ 6 ಗಂಟೆಗಳ ಕಾಲ 3 ಫೇಸ್ ಮತ್ತು 10 ಗಂಟೆಗಳ ಕಾಲ ಸಿಂಗಲ್ ಫೇಸ್ ವಿದ್ಯುತ್ ಸರಬರಾಜು ಮಾಡಲಾಗಿದೆ.

ಜೂನ್ 2009ರ ಅಂತ್ಯದಲ್ಲಿ ಹಾಗೂ ಜುಲೈ ತಿಂಗಳ ಮೊದಲ ವಾರದಲ್ಲಿ ರಾಜ್ಯದಲ್ಲಿ ಉದ್ಭವಿಸಿದ್ದ ವಿದ್ಯುಚ್ಛಕ್ತಿಯ ಕೊರತೆಯಿಂದಾಗಿ ಬೇಡಿಕೆಯಷ್ಟು ವಿದ್ಯುತ್ತನ್ನು ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಸರಬರಾಜು ಮಾಡಲು ಸಾಧ್ಯವಾಗಿರುವುದಿಲ್ಲ.

ಮುಂಗಾರು ಮಳೆ ತಡವಾಗಿ ಆರಂಭವಾದರೂ ಜಲಾನಯನ ಪ್ರದೇಶಗಳಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ, ವಿದ್ಯುತ್ ಪರಿಸ್ಥಿತಿ ಸುಧಾರಿಸುತ್ತಿದೆ. ಕಳೆದ ಒಂದು ವಾರದಿಂದ ಈ ಎರಡು ಜಿಲ್ಲೆಗಳ ನಗರ ಪ್ರದೇಶಗಳಲ್ಲಿ ಲೋಡ್ ಶೆಡ್ಡಿಂಗ್ ರದ್ದುಪಡಿಸಿ ಈಗ ದಿನದ 24 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಿಗೆ 6 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಹಾಗೂ 6 ಗಂಟೆಗಳ ಆಲ ಸಿಂಗಲ್ ಫೇಸ್ ವಿದ್ಯುತ್‌ನ್ನು ಸರಬರಾಜು ಮಾಡಲಾಗುತ್ತಿದೆ. ವಿದ್ಯುತ್ ಸರಬರಾಜನ್ನು ಉತ್ತಮಗೊಳಿಸಲು 2008–09ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿ 220 ಕೆ.ವಿ.ಯ 2, 110 ಕೆ.ವಿ. ಯ 2 ಹಾಗೂ 33 ಕೆ.ವಿ. ಯ 5 ವಿದ್ಯುತ್ ಉಪಕೇಂದ್ರಗಳನ್ನು ನಿರ್ಮಾಣ ಮಾಡಿ ಚಾಲನೆಗೊಳಿಸಲಾಗಿದೆ. ಬಾಗಲಕೋಟೆ

ಜಿಲ್ಲೆಯಲ್ಲಿ 110 ಕೆ.ವಿ.ಯ 3, ಹಾಗೂ 33 ಕೆ.ವಿ.ಯ 4 ವಿದ್ಯುತ್ ಉಪ ಕೇಂದ್ರಗಳನ್ನು ನಿರ್ಮಾಣ ಮಾಡಿ ಚಾಲನೆಗೊಳಿಸಲಾಗಿದೆ. ಅಲ್ಲದೇ, ಪ್ರಸಕ್ತ ವರ್ಷವಾದ 2009–10ನೇ ಸಾಲಿನಲ್ಲಿ ಬಾಗಲಕೋಟೆ ಜಿಲ್ಲೆಯ ವಜ್ರಮಟ್ಟಿಯಲ್ಲಿ 220 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ನಿರ್ಮಾಣ ಮಾಡಿ ದಿನಾಂಕ 8–7–2009ರಂದು ಚಾಲನೆಗೊಳಿಸಲಾಗಿದೆ.

ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹಾಗೂ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಕಳೆದ ಮೂರು ವರ್ಷಗಳಲ್ಲಿ ಕೆಳಕಂಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿವೆ.

ಬಿಜಾಪುರ ಜಿಲ್ಲೆ:

- ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮವು 2 ಸಂಖ್ಯೆಗಳ 220 ಕೆ.ವಿ. ಮತ್ತು 6 ಸಂಖ್ಯೆಗಳ 110 ಕೆ.ವಿ. ವಿದ್ಯುತ್ ಉಪ ಕೇಂದ್ರಗಳನ್ನು ಹಾಗೂ ಒಂದು 110 ಕೆ.ವಿ.ಯ ಪ್ರಸರಣ ಮಾರ್ಗವನ್ನು ನಿರ್ಮಾಣಗೊಳಿಸಿ ಚಾಲನೆಗೊಳಿಸಿದೆ. ಇದಕ್ಕಾಗಿ ತಗುಲಿದ ಒಟ್ಟು ವೆಚ್ಚ 147.42 ಕೋಟಿಗಳು. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು 9 ಸಂಖ್ಯೆಗಳ 33 ಕೆ.ವಿ. ವಿದ್ಯುತ್ ಉಪ ಕೇಂದ್ರಗಳನ್ನು 22.5 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಳಿಸಿ, ಚಾಲನೆಗೊಳಿಸಿದೆ.
- ಬಿಜಾಪುರ ಜಿಲ್ಲೆಯಲ್ಲಿ ಹಾಲಿ 03 ಸಂಖ್ಯೆಗಳ 220 ಕೆ.ವಿ., 17 ಸಂಖ್ಯೆಗಳ 110 ಕೆ.ವಿ. ಮತ್ತು 30 ಸಂಖ್ಯೆಗಳ 33 ಕೆ.ವಿ. ವಿದ್ಯುತ್ ಉಪ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ (ಒಟ್ಟು 50 ಸಂಖ್ಯೆಗಳ ವಿದ್ಯುತ್ ಉಪಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ).
- 12.72 ಕೋಟಿ ರೂ. ವೆಚ್ಚದಲ್ಲಿ 14 ಫೀಡರ್‌ಗಳಲ್ಲಿ ರೂರಲ್ ಲೋಡ್ ಮ್ಯಾನೇಜ್‌ಮೆಂಟ್ ಸಿಸ್ಟಂ (ಆರ್.ಎಲ್.ಎಂ.ಎಸ್.) ಅನುಷ್ಠಾನಗೊಳಿಸಲಾಗಿದೆ.
- ಗಂಗಾ ಕಲ್ಯಾಣ ಯೋಜನೆಯಡಿ 2.36 ಕೋಟಿ ರೂ. ವೆಚ್ಚದಲ್ಲಿ 419 ಸಂಖ್ಯೆಯ ಫಲಾನುಭವಿಗಳ ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. 1.64 ಕೋಟಿ ರೂ.ಗಳ ವೆಚ್ಚದಲ್ಲಿ 219

ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

- ವಾಹಕ ಬದಲಾವಣೆ ಯೋಜನೆಯಡಿ 13.61 ಕೋಟಿ ರೂ.ಗಳ ವೆಚ್ಚದಲ್ಲಿ ಕಡಿಮೆ ಗಾತ್ರದ ವಾಹಕಗಳನ್ನು ಹೆಚ್ಚಿನ ಗಾತ್ರದ ವಾಹಕಗಳ ಮೂಲಕ ಬದಲಾವಣೆ ಮಾಡಲಾಗಿದೆ.
- 23.99 ಕೋಟಿ ರೂ.ಗಳ ವೆಚ್ಚದಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿ 658 ಹರಿಜನ ಬಸ್ತಿ/ಜನತಾ ಕಾಲೋನಿ/ತಾಂಡಾಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು. 36.003 ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳ ವಸತಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.
- ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣ ಯೋಜನೆಯಡಿ (ಎ.ಪಿ.ಡಿ.ಆರ್.ಪಿ) 69.27 ಕೋಟಿ ರೂ. ವೆಚ್ಚದಲ್ಲಿ ಬಿಜಾಪುರ, ಇಂಡಿ, ಮುದ್ದೇಬಿಹಾಳ, ಬಸವನಬಾಗೇವಾಡಿ ಮತ್ತು ತಾಳಿಕೋಟೆ ಪಟ್ಟಣ ಪ್ರದೇಶಗಳ ವಿತರಣಾ ವ್ಯವಸ್ಥೆಯಲ್ಲಿ ಹಲವಾರು ಸುಧಾರಣಾ ಕಾರ್ಯಗಳನ್ನು ನಿರ್ವಹಿಸಲಾಗಿದೆ.

ಕಳೆದ 3 ವರ್ಷಗಳಲ್ಲಿ (2006–07 ರಿಂದ 2008–09 ರವರೆಗೆ) ಮೇಲ್ಕಂಡ ಕಾಮಗಾರಿಗಳಿಗಾಗಿ ಕ.ವಿ.ಪ್ರ.ನಿ.ನಿ. ಹಾಗೂ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗಳು ಒಟ್ಟು 293.51 ಕೋಟಿ ರೂ.ಗಳನ್ನು ವೆಚ್ಚ ಮಾಡಿರುತ್ತವೆ.

ಬಾಗಲಕೋಟೆ ಜಿಲ್ಲೆ:

- ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು 14 ಸಂಖ್ಯೆಗಳ 110 ಕೆ.ವಿ. ವಿದ್ಯುತ್ ಉಪ ಕೇಂದ್ರಗಳನ್ನು ಮತ್ತು 4 ಸಂಖ್ಯೆಗಳ 110 ಕೆ.ವಿ.ಯ ಪ್ರಸರಣ ಮಾರ್ಗಗಳನ್ನು ನಿರ್ಮಾಣಗೊಳಿಸಿ ಚಾಲನೆಗೊಳಿಸಿದೆ. ಇದಕ್ಕಾಗಿ ತಗುಲಿದ ಒಟ್ಟು ವೆಚ್ಚ 103.66 ಕೋಟಿಗಳು. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು 6 ಸಂಖ್ಯೆಗಳ 33 ಕೆ.ವಿ. ವಿದ್ಯುತ್ ಉಪ ಕೇಂದ್ರಗಳನ್ನು 15 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಳಿಸಿ, ಚಾಲನೆಗೊಳಿಸಲಾಗಿದೆ.
- ಬಾಗಲಕೋಟೆ ಜಿಲ್ಲೆಯಲ್ಲಿ ಹಾಲಿ 3 ಸಂಖ್ಯೆಗಳ 220 ಕೆ.ವಿ. 33 ಸಂಖ್ಯೆಗಳ 110 ಕೆ.ವಿ .ತ್ತು 22 ಸಂಖ್ಯೆಗಳ 33 ಕೆ.ವಿ. ವಿದ್ಯುತ್ ಉಪ

ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ (ಒಟ್ಟು 58 ಸಂಖ್ಯೆಗಳ ವಿದ್ಯುತ್ ಉಪ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ)

- 13.76 ಕೋಟಿ ರೂ. ವೆಚ್ಚದಲ್ಲಿ 20 ಫೀಡರ್‌ಗಳಲ್ಲಿ ರೂರಲ್ ಮ್ಯಾನೇಜ್‌ಮೆಂಟ್ ಸಿಸ್ಟಂ (ಆರ್.ಎಲ್.ಎಂ.ಎಸ್) ಅನುಷ್ಠಾನಗೊಳಿಸಲಾಗಿದೆ.
- ಗಂಗಾ ಕಲ್ಯಾಣ ಯೋಜನೆಯಡಿ 0.66 ಕೋಟಿ ರೂ. ವೆಚ್ಚದಲ್ಲಿ 304 ಸಂಖ್ಯೆಗಳ ಫಲಾನುಭವಿಗಳ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. 4.51 ಕೋಟಿ ರೂ. ವೆಚ್ಚದಲ್ಲಿ 601 ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.
- ವಾಹಕ ಬದಲಾವಣೆ ಯೋಜನೆಯಡಿ 7.99 ಕೋಟಿ ರೂ.ಗಳ ವೆಚ್ಚದಲ್ಲಿ ಕಡಿಮೆ ಗಾತ್ರದ ವಾಹಕಗಳನ್ನು ಹೆಚ್ಚಿನ ಗಾತ್ರದ ವಾಹಕಗಳ ಮೂಲಕ ಬದಲಾವಣೆ ಮಾಡಲಾಗಿದೆ.
- 37.08 ಕೋಟಿ ರೂ.ಗಳ ವೆಚ್ಚದಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿ 517 ಹರಿಜನ ಬಸ್ತಿ/ಜನತಾ ಕಾಲೋನಿ/ತಾಂಡಾಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು, 29,626 ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳ ವಸತಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.
- ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣ ಯೋಜನೆಯಡಿ (ಎ.ಪಿ.ಡಿ.ಆರ್.ಪಿ) 54.43 ಕೋಟಿ ರೂ. ವೆಚ್ಚದಲ್ಲಿ ಬಾಗಲಕೋಟೆ, ಜಮಖಂಡಿ, ರಬಕವಿ, ಬನಹಟ್ಟಿ, ತೆರದಾಳ, ಮಹಾಲಿಂಗಪುರ, ಬೀಳಗಿ, ಮುಧೋಳ ಮತ್ತು ಇಳಕಲ್ ಪಟ್ಟಣ ಪ್ರದೇಶಗಳ ವಿತರಣಾ ವ್ಯವಸ್ಥೆಯಲ್ಲಿ ಹಲವಾರು ಸುಧಾರಣಾ ಕಾರ್ಯಗಳನ್ನು ನಿರ್ವಹಿಸಲಾಗಿದೆ.

ಕಳೆದ 3 ವರ್ಷಗಳಲ್ಲಿ (2006–07 ರಿಂದ 2008–09 ರವರೆಗೆ) ಮೇಲ್ಕಂಡ ಕಾಮಗಾರಿಗಳಿಗಾಗಿ ಕ.ವಿ.ಪ್ರ.ನಿ.ನಿ. ಹಾಗೂ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗಳು ಒಟ್ಟು 239.47 ಕೋಟಿ ರೂ.ಗಳನ್ನು ವೆಚ್ಚ ಮಾಡಿರುತ್ತವೆ.

ಬಿಜಾಪುರ ಜಿಲ್ಲೆಯಲ್ಲಿ 2009–10ನೇ ಸಾಲಿನಲ್ಲಿ ಕ.ವಿ.ಪ್ರ.ನಿ.ನಿ. ಹಾಗೂ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗಳ ವತಿಯಿಂದ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರಗಳು:

- ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು 110 ಕೆ.ವಿ.ಯ 5 ಹೊಸ ವಿದ್ಯುತ್ ಉಪ ಕೇಂದ್ರಗಳನ್ನು ಹಾಗೂ 110 ಕೆ.ವಿ.ಯ ಒಂದು ಪ್ರಸರಣ ಮಾರ್ಗವನ್ನು ಒಟ್ಟು 43.22 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿದೆ.
- ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು 2009–10ನೇ ಸಾಲಿನಲ್ಲಿ 'ವಾಹಕ ಬದಲಾವಣೆ ಯೋಜನೆಯಡಿ" 2.57 ಕೋಟಿ ರೂ.ಗಳ ವೆಚ್ಚದಲ್ಲಿ ಕಡಿಮೆ ಗಾತ್ರದ ವಾಹಕಗಳನ್ನು ಹೆಚ್ಚಿನ ಗಾತ್ರದ ವಾಹಕಗಳ ಮೂಲಕ ಬದಲಾವಣೆ ಮಾಡಲಾಗುತ್ತಿದೆ. ಗಂಗಾ ಕಲ್ಯಾಣ ಯೋಜನೆಯಡಿ 9.19 ಕೋಟಿ ರೂ. ವೆಚ್ಚದಲ್ಲಿ 640 ಸಂಖ್ಯೆಯ ಫಲಾನುಭವಿಗಳ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ 2009–10ನೇ ಸಾಲಿನಲ್ಲಿ ಕ.ವಿ.ಪ್ರ.ನಿ.ನಿ. ಹಾಗೂ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗಳ ವತಿಯಿಂದ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರಗಳು:

- ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು 110 ಕೆವಿಯ 1 ಹೊಸ ವಿದ್ಯುತ್ ಉಪ ಕೇಂದ್ರವನ್ನು ಹಾಗೂ 220 ಕೆ.ವಿ.ಯ ಒಂದು ಪ್ರಸರಣ ಮಾರ್ಗವನ್ನು ಮತ್ತು 110 ಕೆ.ವಿ.ಯ 2 ಪ್ರಸರಣ ಮಾರ್ಗಗಳನ್ನು ಹಾಗೂ ಒಂದು 110 ಕೆ.ವಿ. ವಾಹಕ ಬದಲಾವಣೆ ಕಾಮಗಾರಿಗಳನ್ನು 88.37 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿದೆ. ಹೆಸ್ಕಾಂ ಕಂಪನಿಯು ಹಲಗೇರಿಯಲ್ಲಿ ಒಂದು 33 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು 2.58 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತದೆ.
- ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು 2009–10ನೇ ಸಾಲಿನಲ್ಲಿ 'ವಾಹಕ ಬದಲಾವಣೆ ಯೋಜನೆಯಡಿ' 6.23 ಕೋಟಿ ರೂ.ಗಳ ವೆಚ್ಚದಲ್ಲಿ ಕಡಿಮೆ ಗಾತ್ರದ ವಾಹಕಗಳನ್ನು ಹೆಚ್ಚಿನ ಗಾತ್ರದ ವಾಹಕಗಳ ಮೂಲಕ ಬದಲಾವಣೆ ಮಾಡಲಾಗುತ್ತಿದೆ. ಗಂಗಾ ಕಲ್ಯಾಣ

ಯೋಜನೆಯಡಿ 1.45 ಕೋಟಿ ರೂ. ವೆಚ್ಚದಲ್ಲಿ 185 ಸಂಖ್ಯೆಯ ಫಲಾನುಭವಿಗಳ ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ.

ರಾಜ್ಯದಲ್ಲಿ "ನಿರಂತರ ಜ್ಯೋತಿ" ಯೋಜನೆಯಡಿ ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಮತ್ತು ಕೃಷಿಯೇತರ ವಿದ್ಯುತ್ ಬಳಕೆಗಳನ್ನು ಪ್ರತ್ಯೇಕಗೊಳಿಸಿ, ಕೃಷಿಯೇತರ ಉಪಯೋಗಕ್ಕೆ ಅಂದರೆ ಗೃಹ ಬಳಕೆ, ವಾಣಿಜ್ಯ, ಗುಡಿ ಕೈಗಾರಿಕೆ, ಕುಡಿಯುವ ನೀರಿನ ಸ್ಥಾವರಗಳಿಗೆ ದಿನದ 24 ಗಂಟೆಗಳ ಕಾಲ ನಿರಂತರವಾಗಿ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲಾಗುತ್ತದೆ. ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿಯೂ ಸಹ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು ನಿರಂತರ ಜ್ಯೋತಿ ಯೋಜನೆಯನ್ನು ಅನುಷ್ಠಾನಗೊಳಿಸಲಿದೆ.

- ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ, ಬಸವನಬಾಗೇವಾಡಿ, ಇಂಡಿ ಹಾಗೂ ಸಿಂಧಗಿ ತಾಲ್ಲೂಕುಗಳಲ್ಲಿ ಒಟ್ಟು 76.18 ಕೋಟಿ ರೂ.ಗಳ ವೆಚ್ಚದಲ್ಲಿ 'ನಿರಂತರ ಜ್ಯೋತಿ ಯೋಜನೆ' ಯನ್ನು ಅನುಷ್ಠಾನಗೊಳಿಸಲಾಗುವುದು.
- ಬಾಗಲಕೋಟೆ ಜಿಲ್ಲೆಯ ಬೀಳಗಿ, ಹುನಗುಂದ ಮತ್ತು ಬಾದಾಮಿ ತಾಲ್ಲೂಕುಗಳಲ್ಲಿ ಒಟ್ಟು 48.79 ಕೋಟಿ ರೂ.ಗಳ ವೆಚ್ಚದಲ್ಲಿ 'ನಿರಂತರ ಜ್ಯೋತಿ ಯೋಜನೆ' ಯನ್ನು ಅನುಷ್ಠಾನಗೊಳಿಸಲಾಗುವುದು.

ಈಗ ನಮ್ಮ ಎಲ್ಲಾ ಸದಸ್ಯರುಗಳು ಕೂಡ ಏನು ಪ್ರಸ್ತಾಪವನ್ನು ಮಾಡಿದ್ದಾರೆ. ನಿಜ ಆ ಎರಡು ಜಿಲ್ಲೆಗಳು ಸಾಕಷ್ಟು ಸಮಸ್ಯೆಗಳು ಇದೆ. ಈ ಸಮಸ್ಯೆಗಳ ಬಗ್ಗೆ ಅವರ ಜೊತೆಯಲ್ಲಿ ಕುಳಿತು ಚರ್ಚೆ ಮಾಡಿ ಆ ಭಾಗದ ಎರಡು ಜಿಲ್ಲೆಗಳಲ್ಲಿ ಏನೇನು ಸಮಸ್ಯೆಗಳು ಇದೆ ಎನ್ನುವುದನ್ನು ಹಾಗೂ ಇದನ್ನು ಪರಿಹಾರ ಮಾಡುವ ದಿಕ್ಕಿನಲ್ಲಿ ಈ ಅಧಿವೇಶನವು ಮುಗಿದ ನಂತರ ಆಗಸ್ಟ್ ಮೊದಲನೆಯ ವಾರದಲ್ಲಿ ಆಯಾಯ ಜಿಲ್ಲೆಗಳಲ್ಲಿ ಒಂದೊಂದು ದಿನ ಬಿಜಾಪುರ ಜಿಲ್ಲೆಗೆ ಒಂದು ದಿನ, ಬಾಗಲಕೋಟೆ ಜಿಲ್ಲೆಗೆ ಒಂದು ದಿನ ಬೇಟಿ ನೀಡಿ ಅಲ್ಲಿ ನಮ್ಮ ಎಲ್ಲಾ ಉನ್ನತ ಮಟ್ಟದ ಅಧಿಕಾರಿಗಳನ್ನು ಜೊತೆಯಲ್ಲಿ ಅಲ್ಲಿಗೆ ಕರೆದುಕೊಂಡು ಬಂದು ನಮ್ಮ ಶಾಸಕರುಗಳ ಅಪೇಕ್ಷೆಗೆ ತಕ್ಕಂತೆ ಏನೇನು ಕಾಮಗಾರಿಗಳು ಆಗಬೇಕೋ ಅ ದಿಕ್ಕಿನಲ್ಲಿ ಖಂಡಿತವಾಗಿ ಗಮನವನ್ನು ಕೊಡುತ್ತೇನೆ. ಇನ್ನು ಎರಡನೆಯದಾಗಿ ವಿಶೇಷವಾಗಿ...

ಶ್ರೀ ಟಿ.ಬಿ. ಜಯಚಂದ್ರ: ಎಲ್ಲಾ ಜಿಲ್ಲೆಗಳಿಗೂ ತಾವು ಬರಬೇಕು. ಅಲ್ಲಿಯೂ ಮಾಡಿ ಬೇರೆ ಜಿಲ್ಲೆಗಳಿಗೂ ಮಾಡಿ. ಅವರು ಕ್ಷೇತ್ರಕ್ಕೆ ಸೀಮಿತವಾಗಿ ಕೇಳುತ್ತಿದ್ದಾರೆ. ಇಲ್ಲಿ ರಾಜ್ಯಕ್ಕೂ ಸೀಮಿತವಾಗಿರಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕಾಗಿ ಉತ್ತರವನ್ನು ಕೊಡುತ್ತಿದ್ದೇನೆ. ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ: ತುಮಕೂರು ಜಿಲ್ಲೆಯೂ ಬರ ಪೀಡಿತ ಜಿಲ್ಲೆಯಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಈಗ ಎರಡು ಜಿಲ್ಲೆಯದನ್ನು ಮುಗಿಸುತ್ತೇನೆ. ಮತ್ತೇ ಎಲ್ಲಕೂ ಉತ್ತರವನ್ನು ಕೊಡುತ್ತೇನೆ. ದಯವಿಟ್ಟು ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಿ. ವಿಶೇಷವಾಗಿ ಈ ಬಿಜಾಪುರ ಜಿಲ್ಲೆ ಕೂಡಗಿ ಈ ಭಾಗದಲ್ಲಿ 4 ಸಾವಿರ ಮೆಗಾವ್ಯಾಟ್‌ನ ಒಂದು NTPC ಜೊತೆಯಲ್ಲಿ ಈಗಾಗಲೆ MOU ಮಾಡಿಕೊಂಡಾಗಿದೆ. ಈಗ ಮಾನ್ಯ ಸದಸ್ಯರುಗಳು ಎನು ಪ್ರಸ್ತಾಪ ಮಾಡಿದ್ದಾರೆ. ಆ ಭಾಗದಲ್ಲಿ ಒಂದು ಆ ಕುಡಿಯುವ ನೀರಿನ ಯೋಜ್ನನೆಯಲ್ಲಿ ಈಗ ಯಾವುದೇ ಪುನರ್ ವಸತಿ ಸಮಸ್ಯೆಯು ಅಲ್ಲಿ ಬರುತ್ತಿಲ್ಲ. ಅಕಸ್ಮಾತ್ ಯಾವುದಾದರೂ ಬಂದರೆ ತಕ್ಷಣ ಅದಕ್ಕೆ ಮೊದಲನೇ ಆದ್ಯತೆಯನ್ನು ಕೊಟ್ಟು ಪರಿಹಾರವನ್ನು ಮಾಡುತ್ತೇವೆ. ಇನ್ನು ಎರಡನೆಯದಾಗಿ ಇವತ್ತು ಏನು ಜನ ಪ್ರತಿನಿಧಿಗಳ ಸಭೆ ಏನಿದೆ ಆ ಸಭೆಯ ಸಂದರ್ಭದಲ್ಲಿಯೇ ರೈತ ಪ್ರಭುಗಳನ್ನು ಕೂಡ ಸಭೆಗೆ ಕರೆದು ಅಲ್ಲಿಯೂ ಕೂಡ ಈ ಒಂದು ಯೋಜನೆಯ ಮುಖಾಂತರ ಏನೇನು ಅನುಕೂಲಗಳು ಆಗುತ್ತಿದೆ. ಅದನ್ನು ಕೂಡ ಇಡೀ ಆ ಯೋಜನೆಯ ವಿಚಾರವನ್ನು ಕೂಡ ರೈತರಿಗೂ ಮನದಟ್ಟು ಮಾಡಿಕೊಡುತ್ತೇನೆ. ಆ ಭಾಗದಲ್ಲಿ 4 ಸಾವಿರ ಮೆಗಾವ್ಯಾಟ್‌ನ NTPC ಜೊತೆಗೆ ನಾವು ಏನು ಒಪ್ಪಂದವನ್ನು ಮಾಡಿಕೊಂಡಿದ್ದೇವೆ. ಆ ಕಾಮಗಾರಿಯನ್ನು ಕೂಡ ಅಲ್ಲಿ ನಾವು ಪ್ರಸ್ತಾಪ ಮಾಡಲಿದ್ದೇವೆ. ಒಟ್ಟಾರೆ ಈ ಎರಡೂ ಜಿಲ್ಲೆಗಳಲ್ಲಿರುವ ಸಮಸ್ಯೆಗಳ ಬಗ್ಗೆ ಮತ್ತೆ ಈ ಒಂದು ಅಧಿವೇಶನ ಮುಗಿದ ಮೊದಲ ವಾರದಲ್ಲಿ ನಾನು ಅಲ್ಲಿಗೆ ಬರುತ್ತೇನೆ, ನಮ್ಮ ಅಧಿಕಾರಿಗಳೊಂದಿಗೆ ಕುಳಿತು ಚರ್ಚೆ ಮಾಡುತ್ತೇನೆ. ಇನ್ನೊಂದು ವಿಶೇಷವಾಗಿ ನಮ್ಮ ಸರ್ಕಾರ ಚಿಂತನೆ ಮಾಡುತ್ತಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ ಹಾಗೆ ಈಗಾಗಲೇ ರಾಜ್ಯದಲ್ಲಿ ಉತ್ತರ ಕನ್ನಡ, ಬಳ್ಳಾರಿ, ರಾಯಚೂರು, ಶಿವಮೊಗ್ಗ ಈ ನಾಲ್ಕು ಜಿಲ್ಲೆಗಳಲ್ಲಿ ಹೆಚ್ಚಾಗಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುತ್ತಿರುವಂಥ ಜಿಲ್ಲೆಗಳು. ಇದರ ಜೊತೆಗೆ

ಬಿಜಾಪುರ ಈಗ ಸೇರುತ್ತಿದೆ, ಈಗೇನು ಆದ್ಯತೆ ಮೇಲೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಕೈಗಾ, ಶರಾವತಿ ಎಲ್ಲಾ ಯೋಜನೆಗಳು ಜಾರಿ ಇರುವುದರಿಂದ ಅಲ್ಲಿ 24 ಗಂಟೆಗಳ ಕಾಲ ವಿದ್ಯುತ್ ಆಭಾವ ಇದೆ ಅದು ನಮಗೆ ಗೊತ್ತಿದೆ, ಹೀಗಾಗಿ ಉತ್ತರ ಕನ್ನಡ ಜಿಲ್ಲೆಗೂ ಅಲ್ಲಿನ ಸಮಸ್ಯೆಗಳ ಬಗ್ಗೆ ಅರ್ಥ ಮಾಡಿಕೊಂಡು ಅಲ್ಲಿಯೂ ಕೂಡ ನಮ್ಮ ವಿಶ್ವೇಶ್ವರ ಹೆಗಡೆ ಕಾಗೇರಿಯವರ ಜೊತೆ ಕೂಡ ಮಾತನಾಡಿದ್ದೇನೆ. ಆ ಭಾಗದ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೋಸ್ಕರ ಕೂಡ ನಾನು ಅಲ್ಲಿಗೆ ಹೋಗುತ್ತಿದ್ದೇನೆ. ಆ 24 ಗಂಟೆ ಎಲ್ಲೆಲ್ಲಿ ವಿದ್ಯುತ್ ಉತ್ಪಾದನೆ ಮಾಡುತ್ತಿರುವಂಥ ಜಾಗಗಳಲ್ಲಿ ದೀಪದ ಕೆಳಗೆ ಕತ್ತಲೆ ಆಗಬಾರದು ಎನ್ನುವಂಥ ಲೆಕ್ಕದಲ್ಲಿ ನಾವು 24 ಗಂಟೆಗಳ ಕಾಲ ವಿದ್ಯುತ್ ಅನ್ನು ಕೊಡುವಂಥ ದಿಕ್ಕಿನಲ್ಲಿ ಈಗಾಗಲೇ ಸರ್ಕಾರ ಚಿಂತನೆ ಮಾಡುತ್ತಿದೆ. ಇದರ ಜೊತೆಗೆ ರಾಜ್ಯದ ಎಲ್ಲಾ ಜಿಲ್ಲೆಗಳೂ ಕೂಡ ಆಯಾಯ ಜಿಲ್ಲೆಯ ಶಾಸಕರ ಜೊತೆಗೆ ಕುಳಿತು ಅಲ್ಲಿನ ಸಮಸ್ಯೆಗಳ ಬಗ್ಗೆಚರ್ಚೆ ಮಾಡಿ ಪರಿಹಾರ ಮಾಡುವ ನಿಟ್ಟಿನಲ್ಲಿ ಸರ್ಕಾರ ಗಮನ ಕೊಡುತ್ತದೆ, ಮುಂದಿನ ತಿಂಗಳು ಎಲ್ಲಾ ಜಿಲ್ಲೆಗಳಿಗೂ ಕೂಡ ಆ ಜಿಲ್ಲೆಗಳ ಶಾಸಕರೊಂದಿಗೆ ಕುಳಿತು ಚರ್ಚೆ ಮಾಡಿ ಅಲ್ಲಿನ ಸಮಸ್ಯೆಗಳನ್ನು ಗಮನಿಸಿ ಅದನ್ನು ಪರಿಹರಿಸಲಿಕ್ಕೆ ಖಂಡಿತ ಸರ್ಕಾರ ಗಮನ ಕೊಡುತ್ತದೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ): ಮಾನ್ಯ ಸಚಿವರು ಉತ್ತರ ಕೊಡುವಾಗ ಹೇಳಿದರು, ಯಾವ ಜಿಲ್ಲೆಯಲ್ಲಿ ವಿದ್ಯುತ್ ಉತ್ಪಾದನೆ ಮಾಡುತ್ತಾರೆ, ಅವರು ಕತ್ತಲಿನಲ್ಲಿ ಇರಬಾರದು, ಅವರಿಗೆ ಬೆಳಕು ಕೊಡಬೇಕೆನ್ನುವ ಚಿಂತನೆಯೇನೋ ಸರಿ, ಏನು ನಿಮ್ಮಲ್ಲಿ ವಿದ್ಯುಚ್ಛಕ್ತಿ ಸ್ಟಾಕ್ ಇದೆಯೇ? ನೀವು ಎಲ್ಲಿ ಕೊಡುತ್ತೀರಿ ಅಂದರೆ ಬೇರೆ ಜಿಲ್ಲೆಗೆ ಕೊಡದೇ ಹೋದರೆ ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಆಗುತ್ತದೆ ವಿನಃ ನಿಮ್ಮ ಬಳಿ ವಿದ್ಯುತ್ ಅಧಿಕವಾಗಿ ಉತ್ಪಾದನೆಯಾಗಿದ್ದರೆ ಮಾತ್ರ ಇವೆಲ್ಲಾ ಮಾಡಲಿಕ್ಕೆ ಸಾಧ್ಯವಾಗುತ್ತದೆ. ನಿಮ್ಮ ಚಿಂತನೆಯೇನೋ ಒಳ್ಳೆಯದೆ ಅದನ್ನು ನಾನು ಒಪ್ಪುತ್ತೇನೆ ಆದರೆ ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ತುಮಕೂರು ಜಿಲ್ಲೆಯಲ್ಲಿ ಯಾರೂ ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ಅವಕಾಶವಿಲ್ಲ. ಹಾಗಾದರೆ ನಿಮಗೆ ವಿದ್ಯುಚ್ಛಕ್ತಿ ಕಡಿಮೆ ಎಂದರೆ ಹೇಗೆ ಸಾಧ್ಯವಾಗುತ್ತದೆ? ನಿಮ್ಮ ಚಿಂತನೆಯೇನೋ ಒಳ್ಳೆಯದು, ಆದರೆ ಆದ್ಯತೆ ಎಂದರೆ, ಎಲ್ಲೆಲ್ಲಿ ನೀರಾವರಿಗೆ ಪಂಪ್‌ಸೆಟ್ಟುಗಳು ಇರುತ್ತವೆ ಅದನ್ನೇ ನಂಬಿ ಜೀವನ ಮಾಡುವ ಜನರೇನು ಇರುತ್ತಾರೆ, ಇವೆಲ್ಲವುಗಳನ್ನು ಆಧರಿಸಿ

ತೀರ್ಮಾನ ತೆಗೆದುಕೊಳ್ಳಬೇಕು. ನಿಮ್ಮ ಪತ್ರಿಕಾ ಹೇಳಿಕೆ ನೋಡಿದ್ದೇವೆ. ಜನರ ಸಮಾಧಾನಕ್ಕಾಗಿ ಈ ರೀತಿ ಹೇಳಿಕೆ ಕೊಡುವುದು ಅಷ್ಟು ಸಮಂಜಸವಲ್ಲ.

ಅಧ್ಯಕ್ಷರು: ಸ್ಪಷ್ಟೀಕರಣ ಕೇಳಿ.

ಶ್ರೀ ಸಿ.ಎಸ್. ನಾಡಗೌಡ (ಮುದ್ದೇಬಿಹಾಳ): ಮಾನ್ಯ ಸಚಿವರು ಈಗ ಬಹಳ ಸುದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದಾರೆ ಮತ್ತು ಅವರು ಬಹಳ emotional ನಿಂದ ಕೂಡಿರುವಂಥ ಹೇಳಿಕೆಗಳನ್ನು ಕೊಡುತ್ತಾರೆ, ಅದೇ ರೀತಿ ಈ ಹೇಳಿಕೆಯನ್ನು ಕೊಟ್ಟಿದ್ದಾರೆ. ನನ್ನ ಮೊದಲನೇ ಪ್ರಶ್ನೆ, ಗುಣ ಮಟ್ಟದ ವಿದ್ಯುಚ್ಛಕ್ತಿ ಕೊಡಲಿಕ್ಕೆ ಸರ್ಕಾರದ ವತಿಯಿಂದ ಹೋದ ವರ್ಷದಲ್ಲಿ ತಮ್ಮ ಬ್ಯಾಂಕ್‌ನಲ್ಲಿ ಎಷ್ಟು transformers ಕೊಟ್ಟಿದ್ದಾರೆ, ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಬ್ಯಾಂಕ್‌ನಲ್ಲಿ ಒಂದು transformers ಕೊಟ್ಟಿಲ್ಲ. ಕೆಟ್ಟು ಹೋದ transformers ಗಳನ್ನು ಸಹ ರಿಪೇರಿ ಮಾಡಲಿಕ್ಕೆ ಬರುತ್ತಿದ್ದವು, ಅದರಲ್ಲಿ scrap ಆಗಿ ಸುಮಾರು transformers ಕೊರತೆಯಾಗಿವೆ, ಈ ವರ್ಷದಲ್ಲಿ ಕುಡಿಯುವ ನೀರಿಗೋಸ್ಕರ ಒಂದೂವರೆಯಿಂದ ಎರಡು ತಿಂಗಳೊಳಗೆ ಒಂದು transformers ಕೊಡಲಿಕ್ಕೆ ಆಗಿಲ್ಲ. ಇದನ್ನು ಪದೇ ಪದೆ ಹೇಳಿದ್ದೇವೆ, ಬಿಜಾಪುರ ಜಿಲ್ಲೆಯಲ್ಲಿ ನಮಗೆ ಇಡೀ ರಾಜ್ಯಕ್ಕೆ ಸಮಸ್ಯೆ ಇದ್ದಂತಹ ಸಂದರ್ಭದಲ್ಲಿ ನಾವೇನು ಆಕಾಶದಿಂದ ವಿದ್ಯುಚ್ಛಕ್ತಿ ಕೊಡಿ ಎಂದು ಕೇಳುವುದಿಲ್ಲ, ಆದರೆ ಗುಣ ಮಟ್ಟದ ವಿದ್ಯುತ್ ಕೊಡುವುದರಲ್ಲಿ ತಾರತಮ್ಯ ಆಗುತ್ತಿದೆ, ನೀವು ಕಡಿಮೆ ವಿದ್ಯುತ್ ಅನ್ನು ಸಪ್ಲೈ ಮಾಡಿದ್ದೀರಿ, ನಮಗೆ transformers ನಿಂದ ಹಾನಿಯಾಗುತ್ತಿದೆ ಎಂದು ನಮ್ಮ ಸ್ನೇಹಿತರು ಹೇಳಿದರು ಅದರ ಬಗ್ಗೆ ಇದರಲ್ಲಿ ಪ್ರಸ್ತಾಪವೇ ಬರಲಿಲ್ಲ. You have never mentioned anything about that. ಏನು ನಮ್ಮ commitment? ಈಗ ಹೇಳುತ್ತೀರಿ ನಾಳೆ ವಿದ್ಯುತ್ ಸ್ಥಾವರ ಆಲಮಟ್ಟಿಯಲ್ಲಿ ಆಗುತ್ತದೆ, ನಾವು ಅಲ್ಲಿ ನಿಮಗೆ ಸದಾ ವಿದ್ಯುಚ್ಛಕ್ತಿ ಕೊಡುತ್ತೇವೆಂದು ಹೇಳುತ್ತೀರಿ, It is not a State property? ಮಂತ್ರಿಗಳು misleading the house of the people. ನಾನು ಹೇಳುವುದು ಇಷ್ಟೇ, ವಿದ್ಯುತ್ ಅನ್ನು 24 ಗಂಟೆಗಳ ಕಾಲ ಕೊಡುತ್ತೇವೆಂದು ಹೇಳಿದಿರಿ, ಮಾರನೆ ದಿವಸ ಎರಡು ಗಂಟೆಯವರೆಗೆ ಇರುವುದಿಲ್ಲ, ಇಲ್ಲ, ಮಳೆಯಾಗಲಿಲ್ಲ, ನಮಗೆ ವಿದ್ಯುಚ್ಛಕ್ತಿ ಕೊಡುವುದಕ್ಕಾಗುವುದಿಲ್ಲ. ವಿದ್ಯುತ್ ನಮ್ಮ ಕೈಯಲ್ಲಿಲ್ಲ, ಇದು ಎಲ್ಲಾ ರೈತರಿಗೂ ಗೊತ್ತಿರುವಂಥ ವಿಷಯವಾಗಿದೆ, ನಾವು ಎಲ್ಲಿಂದಲೋ ಹುಟ್ಟಿಸಿ ತಂದು ಕೊಟ್ಟು ಒಂದೇ ದಿವಸದಲ್ಲಿ ತಂದು ಕೊಡುವಂಥದ್ದಲ್ಲ, ನೀವು ಏಕೆ ಈ

ರೀತಿ ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದೀರಿ ನಮ್ಮ commitment ಏನಿದೆ ಅದಕ್ಕೆ stick on ಆಗೋಣ, ಜನರ ಮುಂದೆ ಹೇಳೋಣ. ಏನು ನಮ್ಮ ಪರಿಸ್ಥಿತಿ ಇದೆ, ಯಾವ ರೀತಿ ಸುಧಾರಣೆಯನ್ನು ಮಾಡುತ್ತೇವೆ? ನಾವೇನು ಮಾಡಬೇಕೆಂದು ಹೇಳುತ್ತೇವೆ ಎನ್ನುವುದರ ಬಗ್ಗೆ ಕ್ರಮವನ್ನು ಕೈಗೊಳ್ಳಬೇಕು.

ಅಧ್ಯಕ್ಷರು: Specific ಆಗಿ ಕೇಳಿ, ಈಗಾಗಲೇ ಎಲ್ಲಾ ಕೇಳಿದ್ದೀರಿ, ಸ್ಪಷ್ಟೀಕರಣ ಕೇಳಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ನಾನು specific ಆಗಿ ಒಂದು ಪ್ರಶ್ನೆಯನ್ನು ಕೇಳಿದ್ದೆನು, ನಮ್ಮ ಜಿಲ್ಲೆಯಲ್ಲಿ ಒಟ್ಟಾರೆಯಾಗಿ ಕೆ.ಡಿ.ಬಿ. ಮತ್ತು ಎಲ್ಲಾ ಮೀಟಿಂಗ್‌ನಲ್ಲಿ ಮಾತನಾಡಿದಾಗ ಕನಿಷ್ಠ 100 transformers additional ಆಗಿ ಬೇಕು, ಒಂದು ವರ್ಷದಿಂದ ಎಲ್ಲರೂ ಕೇಳುತ್ತಿದ್ದಾರೆ, ಆ ಪ್ರಶ್ನೆಗೆ ಅವರಿಗೆ ಉತ್ತರ ಬರಲಿಲ್ಲ, ಎರಡನೆಯದಾಗಿ transformers ರಿಪೇರಿ ಮಾಡುವಂಥ contractors ಗೆ ಕೋಟ್ಯಾಂತರ ಹಣ ಸರ್ಕಾರದಿಂದ ಬಾಕಿ ಇದೆ. ಸರ್ಕಾರದಿಂದ ಹಣ ಕೊಡುವವರೆಗೆ contractors ರಿಪೇರಿ ಮಾಡುವುದಿಲ್ಲವೆಂದು ಆ contractors ಹೇಳುತ್ತಾರೆ, ಹಾಗಾಗಿ ಬಾಕಿ ಹಣ ಯಾವಾಗ ಕೊಡುತ್ತೀರಿ ಎಂದು ಉತ್ತರ ಕೊಡಬೇಕು. ಮೂರನೆಯದಾಗಿ ಕನಿಷ್ಠ ತಾವು ಉತ್ತರ ಕೊಟ್ಟ ಮೇಲೆ ನಾನು clarification ಕೇಳಬೇಕಾಗುತ್ತದೆ. ತಾವು ಉತ್ತರದಲ್ಲಿ ಹೇಳುತ್ತೀರಿ, "ಕಳೆದ ಬೇಸಿಗೆಯಲ್ಲಿ ನಗರ ಪ್ರದೇಶದಲ್ಲಿ 24 ಗಂಟೆಗಳು, ಗ್ರಾಮೀಣ ಪ್ರದೇಶದಲ್ಲಿ 6 ಗಂಟೆಗಳ ಕಾಲ ಮೂರು ಫೇಸ್ ಮತ್ತು 10 ಗಂಟೆಗಳ ಕಾಲ ಸಿಂಗಲ್ ಫೇಸ್ ವಿದ್ಯುತ್ ಸರಬರಾಜು ಮಾಡಲಾಗಿದೆ ಎಂದು ಸುಳ್ಳು ಹೇಳಿಕೆಯನ್ನು ಮಾನ್ಯ ಸಚಿವರ ಮೂಲಕ ಅಧಿಕಾರಿಗಳು ಹೇಳಿಸುತ್ತಿರುವುದು ನೋಡಿದಾಗ ನಮಗೆ ಬಹಳ ನೋವಾಗುತ್ತದೆ. ನಾವು ಪ್ರತಿನಿತ್ಯ ಅಲ್ಲೇ ಇರುತ್ತೇವೆ, ಅಲ್ಲಿ ಬದುಕುತ್ತೇವೆ, ಈ ರೀತಿ ಸುಳ್ಳು ಹೇಳಿಕೆ ಕೊಡುವುದರ ಮೂಲಕ ನಮ್ಮನ್ನು ನೀವು ಒಪ್ಪಿಸುವುದಕ್ಕೆ ಆಗುವುದಿಲ್ಲ. ಸತ್ಯ ಹೇಳಿ, ಇವತ್ತು ಎರಡು ಗಂಟೆಗಳ ಕಾಲ ಕೂಡ ವಿದ್ಯುತ್ ಕೊಟ್ಟಿಲ್ಲ. ಇವತ್ತು ಬಿಜಾಪುರ ಸಿಟಿಯಲ್ಲಿ 25–30 ಜನ ಕುಡಿಯುವ ನೀರು ಬರುತ್ತಿಲ್ಲವೆಂದು strike ಮಾಡುತ್ತಿದ್ದಾರೆ. ಏಕೆಂದರೆ ನೀರು ಎತ್ತುವ ಪಂಪ್‌ಗೆ ಕರೆಂಟ್ ಇಲ್ಲ. ಎರಡನೆಯ ಉತ್ತರದಲ್ಲಿ ತಾವು ಹೇಳಿದ್ದೀರಿ, ಈಗ ಮಳೆ ಬಂದ ನಂತರ ದಿನದ 24 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುತ್ತದೆ, ಗ್ರಾಮೀಣ ಪ್ರದೇಶಗಳಿಗೆ 6 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಹಾಗೂ 6 ಗಂಟೆಗಳ

ಕಾಲ ಸಿಂಗಲ್ ಫೇಸ್ ವಿದ್ಯುತ್ ಅನ್ನು ಸರಬರಾಜು ಮಾಡಲಾಗುತ್ತದೆ ಎಂಬ ಮಾತನ್ನು ಹೇಳಿದಿರಿ, ಇದಕ್ಕೆ ತಾವು stick on ಆಗಬೇಕು. ಒಂದು ವೇಳೆ ಇದಕ್ಕೆ ತಪ್ಪಿದರೆ ಬಹಳ ತೊಂದರೆಯುಂಟಾಗುತ್ತದೆ. ಏಕೆಂದರೆ ಕೇವಲ ಹೇಳಿಕೆಗಳನ್ನು ಕೊಡುವುದರ ಮೂಲಕ, ಶಾಸಕರು ಸದನದಲ್ಲಿ ಇಷ್ಟೆಲ್ಲಾ ಚರ್ಚೆ ಮಾಡಿದರೂ ತಾವು ತಪ್ಪು ಉತ್ತರವನ್ನು ಕೊಟ್ಟರೆ ಹೇಗೆ? ನಮ್ಮಲ್ಲಿ ಇವತ್ತು ಕೂಡ ಮೂರು ಗಂಟೆಗಳ ಕಾಲ ಕರೆಂಟ್ ಇಲ್ಲ. ಇವತ್ತೂ ಕೂಡ ಕೇವಲ ಎರಡು ಗಂಟೆಗಳ ಕಾಲ ಕರೆಂಟ್ ಇದೆ ಆದರೆ ನೀವು ಆರು ಗಂಟೆ ಕರೆಂಟ್ ಕೊಡುತ್ತೇನೆ ಎಂದು ಹೇಗೆ ಹೇಳುತ್ತೀರಿ ಹಾಗಾಗಿ ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು. ಇವತ್ತು ನಮ್ಮ ಜಿಲ್ಲೆಯ ಲೋಕಸಭಾ ಸದಸ್ಯರು ಗಂಗಾ ಕಲ್ಯಾಣ ಯೋಜನೆಯಲ್ಲಿ ಇವತ್ತು 2–3 ವರ್ಷ electrification ಮಾಡಲಿಕ್ಕೆ ಇವತ್ತು ಕೂಡ ಹಣ ಬಿಡುಗಡೆ ಮಾಡಿಲ್ಲ. Electrification ಮಾಡಿಲ್ಲ, ಲಕ್ಷಾಂತರ ಜನ ರೈತರಿಗೆ ಇದರಿಂದ ಅನ್ಯಾಯವಾಗಿದೆ ಎನ್ನುವುದನ್ನು ನಮ್ಮವರಲ್ಲ, ತಮ್ಮ ಪಕ್ಷದಿಂದ ಆರಿಸಿ ಬಂದಿರತಕ್ಕಂಥ ಒಬ್ಬ ಲೋಕಸಭಾ ಸದಸ್ಯರು ಹೇಳಿಕೆ ಕೊಟ್ಟಿದ್ದಾರೆ ಎನ್ನುವುದನ್ನು ಸಚಿವರು ಗಮನಿಸಬೇಕು. ನಾಲ್ಕನೆಯದಾಗಿ ರಾಜೀವ್ ಗಾಂಧಿ ನಿರಂತರ ಯೋಜನೆಯಲ್ಲಿ ನಮ್ಮ ಜಿಲ್ಲೆಯ 10 ಹಳ್ಳಿಗಳಲ್ಲಿ ನೀರಿಲ್ಲ, 4 ವರ್ಷಗಳಾಯಿತು, 2006–07ರಿಂದ ಇವತ್ತಿನವರೆಗೆ ಕಂಬ ಹಾಕಿದ್ದಾರೆ, ಲೈನ್ ಹಾಕಿಲ್ಲ, ಈ ಬಗ್ಗೆ ಬಹುಶಃ ಎಲ್ಲಾ ಜನ ಸ್ಪಂದನಾ ಮೀಟಿಂಗ್‌ನಲ್ಲಿ ನಾವು ಹೇಳುತ್ತಿದ್ದೇವೆ, ಅಧಿಕಾರಿಗಳು ಆಯಿತು ಸರ್ ಎನ್ನುವುದನ್ನು ಬಿಟ್ಟರೆ ಬೇರೆ ಉತ್ತರ ಕೊಡುವುದಿಲ್ಲ. ತಾವು ಸಭೆ ಕರೆದಾಗ ನಾವೆಲ್ಲಾ ಹೇಳಿದ್ದೆವು, ದಯಮಾಡಿ ಇದಕ್ಕೆಲ್ಲಾ ಸ್ಪಷ್ಟವಾದ ಉತ್ತರವನ್ನು ಕೊಟ್ಟಾಗ ಮಾತ್ರ ನಮ್ಮ ಸಮಸ್ಯೆ ಬಗೆ ಹರಿಯುತ್ತದೆಂದು ಸದನದಲ್ಲಿ ಸಭಾಧ್ಯಕ್ಷರ ಮೂಲಕ ಸನ್ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಸಿದ್ದು ಸವದಿ: ನಿರಂತರ ಜ್ಯೋತಿ ಯೋಜನೆಯಡಿ ನಮ್ಮ ಜಿಲ್ಲೆಯ ಬಾದಾಮಿ, ಬೀಳಗಿ, ಹುನಗುಂದ ಅಷ್ಟೇ ಇದೆ, ನಮ್ಮದು ವಿಶೇಷವಾಗಿ ನೇಕಾರರಿರುವ ಕ್ಷೇತ್ರವಾಗಿದೆ, ಹಳ್ಳಿಯಲ್ಲಿಯೂ ಸಹಿತ ಪವರ್ ಲೂಮ್ ಹಾಕಿದ್ದಾರೆ, ಅಲ್ಲಿ ನಿರಂತರ ಜ್ಯೋತಿ ಕೊಟ್ಟರೆ ಅಲ್ಲಿ ಅವರು ಬದುಕಲಿಕ್ಕೆ ಅನುಕೂಲ ಆಗುತ್ತದೆ. ಇದನ್ನು special case ಎಂದು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಆಯಿತು.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳು ಒಂದು ಒಳ್ಳೆಯ ಹೇಳಿಕೆಯನ್ನು ಕೊಟ್ಟಿದ್ದಾರೆ, ಏಕೆಂದರೆ ರಾಜ್ಯದಲ್ಲಿ 24 ಗಂಟೆ ವಿದ್ಯುತ್ ಕೊಡುತ್ತೇವೆ ಎನ್ನುವಂಥ ಒಂದು ಯೋಜನೆಯನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಸಂತೋಷದ ಸುದ್ದಿಯನ್ನು ಸದನಕ್ಕೆ ತಿಳಿಸಿದ್ದಾರೆ, ಅದಕ್ಕೆ ನಾನು ಮೊದಲನೆಯದಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. 24 ಗಂಟೆ ಕರೆಂಟ್ ಕೊಡಬೇಕಾದರೆ ಎಷ್ಟು ಕರೆಂಟ್ ಉತ್ಪಾದನೆಯಾಗಬೇಕು ಎನ್ನುವುದನ್ನು ದಯಮಾಡಿ ವಿದ್ಯುತ್ ಮಂತ್ರಿಗಳು ಸದನಕ್ಕೆ ತಿಳಿಸಬೇಕು. ಒಂದು ರಾಜ್ಯದಲ್ಲಿ 24 ಗಂಟೆ ಕಾಲ ಕರೆಂಟ್ ಕೊಡಬೇಕಾದರೆ ಎಷ್ಟು ಉತ್ಪಾದನೆಯಾಗಬೇಕು, ಯಾವ್ಯಾವ ಮೂಲದಿಂದ ಕರೆಂಟ್ ಬರುತ್ತದೆ ಎನ್ನುವುದನ್ನು ಸದನಕ್ಕೆ ದಯಮಾಡಿ ತಿಳಿಸಬೇಕೆಂದು ಮಾನ್ಯ ವಿದ್ಯುತ್ ಸಚಿವರಲ್ಲಿ ಮೊದಲನೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಎರಡನೇಯದು ಬಿಜಾಪುರ, ಹುಬ್ಬಳ್ಳಿ ಕಂಪನಿಯಲ್ಲಿ 2006, 2007 ಹಾಗೂ 2008ನೇ ಸಾಲಿನಲ್ಲಿ ಸುಮಾರು 239 ಕೋಟಿ 47 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಅವರು ಹೇಳಿಕೆ ಕೊಡುತ್ತಾರೆ. ಕಳೆದ ಮೂರು ವರ್ಷಗಳ ಅಂಕಿ ಅಂಶ ಕೊಡುತ್ತಾರೆ. 239 ಕೋಟಿ ಎಂದರೆ 2006 ರಿಂದ 2008ರವರೆಗೆ ಕೊಡುತ್ತಾರೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಅವರಿಗೆ ಸ್ವಲ್ಪ ತಾಳ್ಮೆಯಿಂದ ಕುಳಿತುಕೊಳ್ಳುವುದಕ್ಕೆ ಹೇಳಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಹಿಂದಿನ ವರ್ಷದ್ದು ಮರೆತು ಹೋಗಿದ್ದರೆ ಅದನ್ನು ಹೇಳಿ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಅವರಿಗೆ ಹೇಳುವುದಕ್ಕೆ ಶಕ್ತಿಯಿದೆ. ಇವರು ಏಕೆ ಹೀಗೆ ಹೇಳುತ್ತಿದ್ದಾರೆ. 2006 ರಿಂದ 2008ರವರೆಗೆ 239 ಕೋಟಿ 47 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾರೆ. ಈಗ 2009ರಲ್ಲಿ ಹುಬ್ಬಳ್ಳಿ ಕಂಪನಿಯಲ್ಲಿ ಎಷ್ಟು ಹಣ ಖರ್ಚು ಮಾಡುತ್ತೀದ್ದೀರಿ? ಏಕೆಂದರೆ, ನಮ್ಮ ಅಪ್ಪಾಜಿ ನಾಡಗೌಡರು ಒಂದು

ಪ್ರಶ್ನೆಯನ್ನು ಕೇಳಿದರು. ಕಳೆದ ಒಂದು ವರ್ಷದಿಂದ ಒಂದು ಟಿ.ಸಿ. change ಮಾಡಬೇಕಾದರೆ 2–3 ತಿಂಗಳು ಬೇಕು ಎಂದು ಹೇಳಿದರು. ಹಿಂದಿನ ಮೂರು ವರ್ಷಗಳಲ್ಲಿ ಎಷ್ಟು ಟಿ.ಸಿ. ಗಳು change ಆಗಿವೆ? ಈಗ ಕಳೆದ ಒಂದು ವರ್ಷದಿಂದ ಹುಬ್ಬಳ್ಳಿ ಕಂಪನಿಯ ವ್ಯಾಪ್ತಿಯಲ್ಲಿ ಎಷ್ಟು ಟಿ.ಸಿ.ಗಳು ಬದಲಾವಣೆಯಾಗಿವೆ? ಏಕೆಂದರೆ, ಬಿಜಾಪುರ ಮತ್ತು ಬಾಗಲಕೋಟೆ ಎರಡೂ ಹಿಂದುಳಿದ ಪ್ರದೇಶಗಳು ಎಂದು ನಾವು ಹೇಳುತ್ತೇವೆ. ಅದನ್ನು ಮಾನ್ಯ ವಿದ್ಯುತ್ ಮಂತ್ರಿಗಳು ಸಭೆಗೆ ತಿಳಿಸಬೇಕೆಂದು ನಾನು ಮನವಿ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ಉಪನಾಯಕರು ಈ ಮುಂಚೆ ಕೇಳಿದರು. ಈ ಭಾಗದ ರೈತರಿಗೆ 24 ಗಂಟೆಗಳ ಕಾಲ ವಿದ್ಯುತ್ ಕೊಡಲು ಎಲ್ಲಿ ವಿದ್ಯುತ್ ಉತ್ಪಾದನೆ ಮಾಡುತ್ತಿದ್ದಾರೆ? ಆ ಜಿಲ್ಲೆಗೆ ಕೊಡಬೇಕಾದರೆ stock ಇಟ್ಟಿದ್ದೀರಾ? ಎಲ್ಲಿಂದ ವಿದ್ಯುತ್ ಅನ್ನು ತರುತ್ತೀರಿ ಎಂದು ಕೇಳಿದರು. ನಾನು stock ಇಡುವುದಕ್ಕೆ ಬರುವುದಿಲ್ಲ. ಅದು ನಿಮಗೆ ಗೊತ್ತಿದೆ. ಆದರೆ, ರಾಜ್ಯದಲ್ಲಿ ಕರೆಂಟ್ ಅಂದರೆ ವಿದ್ಯುತ್ ಕಳ್ಳತನ ಎಷ್ಟಾಗುತ್ತಿದೆ ಎನ್ನುವುದು ನಿಮಗೆ ಗೊತ್ತು. T & D Loss ಎಷ್ಟು ಆಗುತ್ತಿದೆ ಎನ್ನುವುದು ನಿಮಗೆ ಗೊತ್ತು. ನಾವು ಏಕೆ ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಕರೆಂಟ್ ಅನ್ನು 24 ಗಂಟೆಗಳ ಕಾಲ ಕೊಡುವುದಕ್ಕೆ ಆಗುತ್ತಿಲ್ಲವೆಂದರೆ, ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಆಗುತ್ತಿರುವುದು ಹತ್ತಿರ ಹತ್ತಿರ ಎಂದರೆ 7 ಸಾವಿರ ಮೆಗಾವ್ಯಾಟ್. ಬೇಕಾಗಿರುವುದು 10,200 ಮೆಗಾವ್ಯಾಟ್. ಹತ್ತಿರ ಹತ್ತಿರವೆಂದರೆ ಅರ್ಧಕ್ಕೆ ಅರ್ಧ ಕೊರತೆಯಿರುವುದು ನಮಗೆ ಗೊತ್ತಿದೆ. ಕೊರತೆಯಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ, ಆ ಜಿಲ್ಲೆಗಳು, ಈಗ ಅವರು ಪ್ರಸ್ತಾಪ ಮಾಡಿದರು. ಈ ವಿದ್ಯುತ್ ಕೊರತೆ ಏನು ನಮಗೆ ಇದೆ, ಸುಮಾರು ಮೂರು ಸಾವಿರ–ಮೂರುವರೆ ಸಾವಿರ ಮೆಗಾವ್ಯಾಟ್‌ನಷ್ಟು ಏನು ಕೊರತೆ ಇದೆ, ಇದನ್ನು ತುಂಬಬೇಕಾದರೆ, ಯಾವುದಾದರೂ ಜಿಲ್ಲೆಗಳು ಮುಂದೆ ಬರಬೇಕು. ಬಿಜಾಪುರ ಜಿಲ್ಲೆಯವರಿಗೆ ಏತಕ್ಕೆ 24 ಗಂಟೆಗಳ ಕಾಲ ಕರೆಂಟ್ ಸರಬರಾಜು ಮಾಡುತ್ತೇವೆ ಎಂದರೆ, ಉತ್ತರ ಕನ್ನಡ ಜಿಲ್ಲೆಯಲ್ಲಿನ ಪರಿಸ್ಥಿತಿಯನ್ನು ನೀವು ಅನುಭವಿಸಿದ್ದೀರಿ, ನಾವು ಅನುಭವಿಸಿದ್ದೇವೆ. ನಾವು ನಿಮಗೆ ಅವಕಾಶ ಕೊಡುವುದಿಲ್ಲ ಎಂದು ಕುಳಿತುಕೊಂಡಿದ್ದಾರೆ. ಇಷ್ಟೆಲ್ಲಾ ಯೋಜನೆಗಳನ್ನು ಕೊಟ್ಟರೂ ಸಹ ನಮಗೆ

ಇನ್ನೂ ಕೊಟ್ಟಿಲ್ಲ ಎಂದು ಹೇಳುತ್ತಿದ್ದಾರೆ. ಹೀಗಾಗಿ ಎಲ್ಲೆಲ್ಲಿ, ಯಾವ್ಯಾವ ಜಿಲ್ಲೆಗಳಲ್ಲಿ ವಿದ್ಯುತ್ ಉತ್ಪಾದನೆಯಾಗುತ್ತಿದೆ, ಆ ಜಿಲ್ಲೆಗಳಿಗೆ ಕೊಡಬೇಕು ಎನ್ನುವುದು ಕರ್ತವ್ಯ ಎನ್ನುವ ಮಾತನ್ನು ಹೇಳಿದೆನೇ ವಿನಃ ಎಲ್ಲಿಂದ ತರುತ್ತೀರಿ ಎಂದರೆ, ನಾನು ಹೇಳಿದೆ. ವಿದ್ಯುತ್ ಕಳ್ಳತನ ನಿಲ್ಲಿಸುತ್ತೇವೆ, T & D Loss ನಿಲ್ಲಿಸುತ್ತೇವೆ, ಸಾಧ್ಯವಾದರೆ ಖರೀದಿ ಮಾಡುತ್ತೇವೆ. ಇದು ನಮ್ಮ ಅಪೇಕ್ಷೆ ಬಿಟ್ಟರೆ ಬೇರೆ ಏನೂ ಇಲ್ಲ. ಎಲ್ಲಾ ಜಿಲ್ಲೆಗಳಿಗೂ ವಿದ್ಯುತ್ ಪೂರೈಕೆ ಮಾಡಬೇಕು ಎಂಬ ಆಸೆ ನಮಗಿದೆ. ಆದರೆ, ಯಾವಾಗ ಕೊಡುತ್ತೇವೆ, ಈಗಾಗಲೇ ನಾವು 8,200 ಮೆಗಾವ್ಯಾಟ್‌ನಷ್ಟು ವಿದ್ಯುತ್ ಅನ್ನು MOU ಮಾಡಿಕೊಂಡಿದ್ದೇವೆ. ಬಿಜಾಪುರ ಜಿಲ್ಲೆ ಹಾಗೂ ಛತ್ತೀಸ್‌ಗಡದಿಂದ ಕೂಡ ಹಾಗೂ ಸುಮಾರು ಬೇರೆ ಬೇರೆ ಕಡೆಯಲ್ಲಿ MOU ಮಾಡಿಕೊಂಡಿದ್ದೇವೆ ಎಂಬುದು ನಿಮಗೆ ಗೊತ್ತಿದೆ. ಹಾಗಾಗಿ ನಮ್ಮ ಅವಧಿ ಮುಗಿಯುವುದರೊಳಗೆ ಕರ್ನಾಟಕ ರಾಜ್ಯದಲ್ಲಿ ಕರ್ನಾಟಕವನ್ನು 'ವಿದ್ಯುತ್ತಿನ ಸ್ವಾವಲಂಭಿ ಕರ್ನಾಟಕ' ವನ್ನು ನಾವು ಮಾಡಬೇಕು ಎನ್ನುವ ನಮ್ಮ ಅಪೇಕ್ಷೆ ಇದೆ. ಆ ದಿಕ್ಕಿನಲ್ಲಿ ಹೋಗುತ್ತೇವೆ. ಇದು ಮೊದಲನೆಯದು. ಎರಡನೆಯದಾಗಿ...

ಶ್ರೀ ಟಿ.ಬಿ. ಜಯಚಂದ್ರ (ಶಿರಾ): ಅಂದರೆ ತಾವು ಒಪ್ಪಿಕೊಂಡ ಹಾಗೆ ಆಯಿತು. ತಾವು ಈಗ ಕರ್ತವ್ಯ ಎಂದು ಹೇಳಿದ್ದೀರಿ ಅಷ್ಟೆ. ಆದರೆ, ಇದು ಸಮಾಧಾನಕ್ಕೋಸ್ಕರ ಹೇಳಿದಂಥ ಮಾತಾಗುತ್ತದೆ.

(ಗೊಂದಲ)

ಅಧ್ಯಕ್ಷರು: ಅವರು ಉತ್ತರ complete ಮಾಡಲಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ನೀವು ಏನಾದರೂ ಅರ್ಥ ಮಾಡಿಕೊಳ್ಳಿ. ಈ ಸರ್ಕಾರದ ಕಳಕಳಿ ನಿಮಗೆ ಅರ್ಥವಾಗಿದೆ ಎಂದು ನಾನು ಭಾವಿಸುತ್ತೇನೆ.

(ಗೊಂದಲ)

ಅಧ್ಯಕ್ಷರು: ಅವರು ಉತ್ತರ complete ಮಾಡಲಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಕಳಕಳಿ ವಿಚಾರವನ್ನು, ನೀವು ಹೇಳುತ್ತಿರುವುದನ್ನು ನೋಡಿದರೆ, ನಿಮ್ಮ ಅಧಿಕಾರದ ಅವಧಿಯಲ್ಲಿ ಸಂಪೂರ್ಣವಾಗಿ ವಿದ್ಯುಚ್ಛಕ್ತಿ ಸಮಸ್ಯೆಯನ್ನು ಬಗೆ ಹರಿಸಿಬಿಡುತ್ತೇವೆ ಎಂದು ಹೇಳುತ್ತಿದ್ದೀರಿ. ಒಂದು T &D Loss ಇದು ಕಳೆದ 60 ವರ್ಷಗಳಿಂದಲೂ

ನಡೆಯುತ್ತಿದೆ. ಯಾರೂ ಕಡಿಮೆ ಮಾಡುವುದಕ್ಕಾಗಲಿಲ್ಲ. ಅದೇ ಪರಿಸ್ಥಿತಿ ಇದೆ. ನಿಮ್ಮ ಉತ್ಸಾಹವನ್ನು ನಾನು ಮೆಚ್ಚುತ್ತೇನೆ, ಅಭಿನಂದಿಸುತ್ತೇನೆ. ಆದರೆ, ಸಮಸ್ಯೆಯನ್ನು ಬಗೆಹರಿಸುವುದು ಅಷ್ಟು ಸುಲಭವಲ್ಲ.

ಅಧ್ಯಕ್ಷರು: ಅದಕ್ಕೆ ಅವರು ಉತ್ತರ ಕೊಡಲಿ.

ಶ್ರೀ ಟಿ.ಬಿ. ಜಯಚಂದ್ರ: ಕಾರಣವೇನೆಂದರೆ, ಇವತ್ತು installed capacity of Karnataka…

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಈಗ ಬಿಜಾಪುರ ಜಿಲ್ಲೆ ಬಗ್ಗೆ ಚರ್ಚೆ ಮಾಡಿದ್ದೀರಿ. General ಆಗಿ ಚರ್ಚೆ ಮಾಡಿದರೆ ನನ್ನದು ಏನೂ ಅಭ್ಯಂತರವಿಲ್ಲ. ಅದಕ್ಕಾಗಿ ಎಂದು ಒಂದು ದಿನ ಕೊಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಕೊಟ್ಟರೆ ಕೊಡಲಿ, ಸುಮಾರು 6 ಸಾವಿರ ಮೆಗಾವ್ಯಾಟ್...

(ಗೊಂದಲ)

ಅಧ್ಯಕ್ಷರು: ಮೊದಲು ಅವರ ಉತ್ತರ ಕೊಡಲಿ. ಅವರು complete ಮಾಡಲಿ. ಮಾನ್ಯ ಜಯಚಂದ್ರರವರೇ ಅವರು ಉತ್ತರ ಕೊಡಲಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ವಿದ್ಯುತ್ ಮಂತ್ರಿಗಳು ನಮ್ಮ ಅವಧಿಯೊಳಗೆ ವಿದ್ಯುತ್ ಅನ್ನು ಸರಿಯಾದ ರೀತಿಯಲ್ಲಿ ಪೂರೈಕೆ ಮಾಡುತ್ತೇವೆ ಎಂದು ಹೇಳಿದ್ದಾರೆ. ದಯಮಾಡಿ ಸ್ವಾಮಿ. ಬೇಕಾದರೆ ನಾನು ವಿರೋಧ ಪಕ್ಷದ ನಾಯಕರಿಗೂ ಮನವಿ ಮಾಡಿ ಬಿಡುತ್ತೇನೆ. ಬಾಕಿ ವಿಷಯಗಳನ್ನು ತೆಗೆದು, ನಾಳೆಯೇ ಈ ವಿಷಯವನ್ನು ಚರ್ಚೆಗೆ ಇಡಿ. ವಿದ್ಯುತ್ ಅನ್ನು ಯಾವ್ಯಾವ ಮೂಲದಿಂದ ಅವರ ಅವಧಿಯಲ್ಲಿ ಕೊಡುತ್ತಾರೆ ಎನ್ನುವುದನ್ನು ಈ ಸದನಕ್ಕೆ ಮತ್ತು ಈ ರಾಜ್ಯದ ಜನತೆಗೆ ತಿಳಿಸಿ ಬಿಟ್ಟರೆ ನಾನು ಅವರಿಗೆ ಋಣಿಯಾಗಿರುತ್ತೇನೆ. ಏಕೆಂದರೆ, ಯಾವ್ಯಾವ ಮೂಲದಿಂದ ಎಷ್ಟು ಸಾವಿರ ಮೆಗಾವ್ಯಾಟ್‌ನ ವಿದ್ಯುತ್ ಯಾವ್ಯಾವ ವರ್ಷ ಎಷ್ಟೆಷ್ಟು ಬರುತ್ತದೆ ಮತ್ತು ಯಾವ್ಯಾವ ಕಾಲದಲ್ಲಿ ಎಷ್ಟೆಷ್ಟು T & D Loss ಆಗಿದೆ.

(ಗೊಂದಲ)

ಅಧ್ಯಕ್ಷರು: ಬಜೆಟ್ ಮೇಲೆ ಚರ್ಚೆ ಮಾಡಬೇಕಾದರೆ ಇದನ್ನು ಚರ್ಚೆ ಮಾಡಿ. ಮಾನ್ಯ ರೇವಣ್ಣನವರೇ ಅದರ ಬಗ್ಗೆ ಆಗ ಮಾತನಾಡಿ. Next agenda ದಲ್ಲಿ ಬಜೆಟ್ ಬಗ್ಗೆ ಚರ್ಚೆ ಇದೆ ಅದರಲ್ಲಿ ಎಲ್ಲರೂ ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಬಾಕಿ ವಿಷಯ ಎಲ್ಲಾ ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರು ಪ್ರಸ್ತಾಪ ಮಾಡಿದ್ದು ಸರಿ. ಸುಮ್ಮನೆ ನಾವು ಗಾಳಿಗೆ ವಿದ್ಯುತ್ ತರುವುದಕ್ಕೆ ಬರುತ್ತಿಲ್ಲ. ನಾನು ಗಾಳಿ ಮಾತನಾಡುತ್ತಿಲ್ಲ. ಕಳೆದ ವರ್ಷದಲ್ಲಿ ನಾವು 9 ಸಾವಿರ ಮೆಗಾವ್ಯಾಟ್‌ಗೆ ಹಿಂದೆ renewable energiesಗೆ ಅವಕಾಶ ಮಾಡಿಕೊಂಡಿದ್ದೆವು. ಅವರು ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ permission ತೆಗೆದುಕೊಳ್ಳಲಿಲ್ಲ. ಅದು land lobby ಯಾಗಿ ಇತ್ತು. 52 ಜನದ್ದು cancel ಮಾಡಿಸಿದ್ದೇವೆ. Cancel ಮಾಡಿಸಿ ಹೊಸದಾಗಿ ಅವಕಾಶ ಮಾಡಿಕೊಟ್ಟಿದ್ದೇವೆ. ಒಂದೇ ವರ್ಷದಲ್ಲಿ ಈಗಾಗಲೇ 1,250 ಮೆಗಾವ್ಯಾಟ್‌ನಷ್ಟು ವಿದ್ಯುತ್ ಅನ್ನು ಹಿಂದಿನ 7 ಸಾವಿರ ಮೆಗಾವ್ಯಾಟ್‌ಗೆ add ಮಾಡಿದ್ದೇವೆ. ಈ ವರ್ಷದಲ್ಲಿ ಮತ್ತೆ 1 ಸಾವಿರ ಮೆಗಾವ್ಯಾಟ್ ಸೇರಿಸುತ್ತೇವೆ. ಬರುವ ವರ್ಷದಲ್ಲಿ...

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ನಾವು ಮಾಡಿದ್ದು, ಅದು ಯಾವಾಗ ಪ್ರಾರಂಭವಾಯಿತು?

ಅಧ್ಯಕ್ಷರು: ಅವರು complete ಮಾಡಲಿ.

ಶ್ರೀ ಕೆ.ಎಸ್. ಈಶ್ವರಪ್ಪ: ನೀವೇ ಮಾಡಿದ್ದು. ನಾನು ಇಲ್ಲವೆಂದು ಹೇಳಲಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಮತ್ತೆ ನೀವು ಅಷ್ಟು ಹೇಳಿ ಸಾಕು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ನೀವೇ ಮಾಡಿದ್ದು. ಅದಕ್ಕೆ ಒಂದು ರೂಪ ಕೊಡುತ್ತಿದ್ದೇವೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ನಾನು ಈಶ್ವರಪ್ಪನವರಿಗೆ ಅನುಕೂಲವಾಗಲಿ ಎಂದು ಹೇಳುತ್ತಿದ್ದೇನೆ. ನನ್ನ ಹೆಸರೇನೂ ಬೇಡ. ಮಾನ್ಯ ಈಶ್ವರಪ್ಪನವರ

ಅವಧಿಯೊಳಗೆ 24 ಗಂಟೆ ಕಾಲ ಕರೆಂಟ್ ಕೊಟ್ಟರೆ ನಾವೆಲ್ಲರೂ ಅವರಿಗೆ ಚಿರಋಣಿಯಾಗಿರುತ್ತೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಹಿಂದಿನ ಇಂಧನ ಮಂತ್ರಿಗಳು ಹೇಳುತ್ತಿರುವುದು ಸರಿಯಿದೆ. ನನ್ನ ಆಸೆ ಏನು ಎಂದು ನಿಮ್ಮೆಲ್ಲರ ಅನುಭವಕ್ಕೆ ಬಂದಿದೆ. 27, 28 ಹಾಗು 29 ಮೂರು ದಿನಗಳ ಕಾಲ ಚರ್ಚೆ ಮಾಡಬೇಕು.

ಶ್ರೀ ಸಿದ್ದರಾಮಯ್ಯ: ಈಶ್ವರಪ್ಪನವರು ಒಪ್ಪಿಕೊಳ್ಳುತ್ತಿದ್ದಾರೆ. ಒಂದು ದಿನ ಚರ್ಚೆ ಮಾಡಿ ಸ್ವಾಮಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಈಗ ಇನ್ನು ದಿನಾಂಕ 29ರ ತನಕ ಅವಕಾಶವಿದೆ. ಬಿಲ್ಲು ಇಲ್ಲ, ಬಾಣವನ್ನು ಬಿಟ್ಟಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಒಂದು ದಿನ ಚರ್ಚೆ ಮಾಡೋಣ ಬಿಡಿ. ಮಾನ್ಯ ಅಧ್ಯಕ್ಷರೆ, ನಾಳೆ ಚರ್ಚೆಗೆ ಇಟ್ಟುಕೊಳ್ಳೋಣ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ನಿಮ್ಮೆಲ್ಲರ ಹಿರಿಯರ ಅನುಭವ ನನಗೆ ಮಾರ್ಗದರ್ಶನವಾಗಿರಲಿ. ಮಾನ್ಯ ಅಧ್ಯಕ್ಷರೆ, ಅದಕ್ಕೋಸ್ಕರ ಒಂದು ದಿನ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಇದು ಬಹಳ ಅಗತ್ಯವಾಗಿರತಕ್ಕಂಥ ವಿಚಾರ. ಇದು ಅವರು ಎರಡು ಜಿಲ್ಲೆಗಳಿಗೆ ಕೇಳಿದ್ದರಿಂದ ನಾನು ಮಾತನಾಡದೇ ಕುಳಿತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ನೀವು ಹೇಳುತ್ತಿರುವುದು correct.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಅವರು ಬಿಜಾಪುರ, ಬಾಗಲಕೋಟೆಗೆ ವಿದ್ಯುತ್ ಅನ್ನು ಕೇಳಿದರು altight. ಇವರು ಎಲ್ಲಾ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಕೂಡ ಚರ್ಚೆ ಮಾಡಬೇಕೆಂದರೆ, ಚರ್ಚೆ ಮಾಡೋಣ. T & D Loss, theft, ಎಷ್ಟು ಮೆಗಾವ್ಯಾಟ್‌ನಷ್ಟು ವಿದ್ಯುತ್ production ಆಗಿದೆ? ಎಷ್ಟು million rate ಆಗಿದೆ? ಯಾರ್ಯಾರ ಕಾಲದಲ್ಲಿ ಎಷ್ಟು ಆಗಿದೆ? ಏನು ಆಗಿಲ್ಲ? ಆಮೇಲೆ energy audit ಏನು ಆಗಿದೆ? ಎಲ್ಲಿ ನಿಂತು ಹೋಗಿದೆ? ಏಕೆ energy audit ಆಗಲಿಲ್ಲ? ಇಲ್ಲಿಯವರೆಗೆ energy audit ಎಷ್ಟು ಆಗಿದೆ?

ಮುಂದಿನ ಯೋಜನೆಗಳೇನು? ಈ ಎಲ್ಲದರ ಬಗ್ಗೆ ಚರ್ಚೆ ಮಾಡೋಣ. ಮಾನ್ಯ ಈಶ್ವರಪ್ಪನವರೇ, ಈಗ ಏನಾಗಿದೆ ಎಂದರೆ, ಒಂದು ಊರಿನಲ್ಲಿ transformer ಸುಟ್ಟು ಹೋಗುತ್ತದೆ. ಆ ಸುಟ್ಟು ಹೋದ transformer ಅನ್ನು ಬಿಚ್ಚಿಕೊಂಡು ಬರುತ್ತಾರೆ. ಅದಕ್ಕೆ ಇನ್ನೊಂದು transformer ಅನ್ನು replace ಮಾಡುವುದಕ್ಕೆ ಅವರ ಹತ್ತಿರ stand by ಇರುವುದಿಲ್ಲ. ಅವರು ಸುಟ್ಟು ಹೋದ transformer ಅನ್ನು ಬಿಚ್ಚಿಕೊಂಡು ಬಂದು ರಿಪೇರಿ ಮಾಡುವವರೆಗೆ ಒಂದು ತಿಂಗಳವರೆಗೆ ಕರೆಂಟ್ ಇರುವುದಿಲ್ಲ. 2–3 ತಿಂಗಳು transformer ಇಲ್ಲದೇ ಇರುತ್ತಾರೆ. ನಮ್ಮಲ್ಲಿ ಚಾಮುಂಡೇಶ್ವರಿ ಅಂದರೆ ನಮ್ಮಲ್ಲಿ ಚೆಸ್ಕಾಂ ಇದೆಯೆಲ್ಲಾ, ಅದೆ ಎಂ.ಡಿ. ಯವರನ್ನು ವಿಚಾರಿಸಿದರೆ, ಇಲ್ಲ ಸಾರ್ ನಮ್ಮ ಹತ್ತಿರ ಸ್ಟಾಕ್ ಇಲ್ಲ, materials ಇಲ್ಲವೆಂದು ಹೇಳುತ್ತಾರೆ. ಮತ್ತೆ ನಿರಂತರ ವಿದ್ಯುತ್ ಅನ್ನು ಹೇಗೆ ಕೊಡುವುದಕ್ಕೆ ಆಗುತ್ತದೆ? How can you give current? ನಿರಂತರ ವಿದ್ಯುತ್ ಅನ್ನು ಏನು ಮಾಡುತ್ತಿದ್ದಾರೆ ಎಂದರೆ, ಕೃಷಿಯೇತರ ಮತ್ತು ಕೃಷಿಗೆ ಕೊಟ್ಟರೆ, ರೈತರಿಗೆ ಹೇಗೆ ಉಪಯೋಗ ಆಗುತ್ತದೆ? ರೈತರಿಗೆ ಮೂರು ಕಾಸಿನ ಉಪಯೋಗವಾಗುವುದಿಲ್ಲ. ಮತ್ತೆ ಅದನ್ನು ನಿರಂತರ ಎಂದು ಏಕೆ ಕರೆಯುತ್ತೀರಿ? ಒಂದು ಭಾಗವನ್ನು ಬಿಟ್ಟು, ಇನ್ನೊಂದು ಭಾಗಕ್ಕೆ ವಿದ್ಯುತ್ ಅನ್ನು ಪೂರೈಸಿದರೆ ಅದು ನಿರಂತರವಾಗುತ್ತದೆಯೇ? ಆದ್ದರಿಂದ, ಇದರ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಬೇಕು. ನಾಳೆಯೇ ಈ ವಿಷಯವನ್ನು ತೆಗೆದುಕೊಂಡು ಇಡೀ ದಿನ ಅಂದರೆ ನಾಳೆ ಮದ್ಯಾಹ್ನದವರೆಗೆ ಚರ್ಚೆ ಮಾಡೋಣ. ನಾವು ಸಹ ನಮ್ಮ ಸಲಹೆಗಳು ಹಾಗೂ ಅನುಭವಗಳು ಏನೇನಿವೆ ಎಂದು ಹೇಳೋಣ. KEBಯಲ್ಲಿ ಏನೇನು ಆಗುತ್ತಿದೆ? ಹಿಂದೆ ಏನಾಗಿದೆ? ಮುಂದೆ ಏನಾಗುತ್ತದೆ ಎಂಬುದರ ಬಗ್ಗೆ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಸೋಮವಾರ ಈ ವಿಷಯವನ್ನು ತೆಗೆದುಕೊಂಡು ಚರ್ಚೆ ಮಾಡಿದರೆ ಒಳ್ಳೆಯದು. ಏಕೆಂದರೆ, ಇಂಧನ ಸಚಿವರಿಗೆ ಅನುಕೂಲವಾಗುತ್ತದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸಮಸ್ಯೆ ಸಾಕಷ್ಟು ಇರುವುದರಿಂದ ಇವರೆಲ್ಲರ ಅನುಭವವನ್ನು ನಮಗೆ ಧಾರೆ ಎರೆದು ಕೊಡಬೇಕಾದರೆ, ಇದಕ್ಕೆ ಸಂಬಂಧಿಸಿದಂತೆ ಚರ್ಚೆ ಮಾಡಲು 2–3 ದಿವಸಗಳ

ಕಾಲ ಒಂದು ವಿಶೇಷ ಅಧಿವೇಶನವನ್ನು ಕರೆಯಿರಿ. ಎರಡನೆಯದಾಗಿ ಇವತ್ತು ಏನು ಪರಿಸ್ಥಿತಿ ಇದೆ ಎಂದರೆ, transformer ಬಗ್ಗೆ ತಾವು ಹೇಳುತ್ತಿರುವುದು ಸರಿಯಾಗಿದೆ. ಇದು ಮಾನ್ಯ ರೇವಣ್ಣನವರಿಗೆ ಗೊತ್ತಿದೆ. KAVIKA ಸಂಸ್ಥೆ ಸರ್ಕಾರಕ್ಕೆ ಸೇರಿದ್ದು ಆಗಿರುತ್ತದೆ. ಅಲ್ಲಿ ಉತ್ಪಾದನೆ ಮಾಡಿಲ್ಲ. ಅಲ್ಲಿ ಇವತ್ತು transformer ತಯಾರಾಗಿವೆ, ಅದನ್ನು ಮಾಡುವುದಕ್ಕೆ ಜನ ಇದ್ದಾರೆ, machineries ಇದೆ, ಎಲ್ಲಾ ಸಹ ಇದೆ. KAVIKA ಸಂಸ್ಥೆಯವರಿಗೆ 100% production ಮಾಡುವುದಕ್ಕೆ ಅವಕಾಶವೇ ಸಿಕ್ಕಿಲ್ಲ. ಏಕೆ ಎಂಬುದು ನನಗೆ ಗೊತ್ತಿಲ್ಲ. ಈಗ ನಾವು ಅವರಿಗೆ transformer ಅನ್ನು ಎಷ್ಟು production ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನೂ ನೀವು production ಮಾಡಬೇಕು ಎಂದು direction ಕೊಟ್ಟಿದ್ದೇವೆ.

ಅಧ್ಯಕ್ಷರು: ಇಲ್ಲಿಗೆ ಈ ವಿಷಯವನ್ನು ಮುಕ್ತಾಯಗೊಳಿಸೋಣ.

ಶ್ರೀ ಸಿದ್ದರಾಮಯ್ಯ: ನಾಳೆ, ಈ ವಿಷಯ ಚರ್ಚೆಗೆ ಇದೆಯೇ?

ಅಧ್ಯಕ್ಷರು: ವಿಶೇಷವಾಗಿ ಈ ವಿಷಯದ ಬಗ್ಗೆ ಬೇರೆ ಅವಕಾಶ ಕೊಡೋಣ. ಈ ವಿಷಯವನ್ನು ಸೋಮವಾರ, ಮಂಗಳವಾರ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಖಾತೆ ಸಚಿವರು): ಬೆಳಗಾಂನಲ್ಲಿ ನಡೆದ ಕಳೆದ ವಿಧಾನಸಭೆ ಅಧಿವೇಶನದಲ್ಲೂ ನಾನು ಇದೇ ಪ್ರಶ್ನೆ ಕೇಳಿದೆ, ಈ ವಿಷಯಕ್ಕೆ ಸಂಬಂಧಿಸಿದಂತೆ ದಯವಿಟ್ಟು ಮೂರು ದಿನ ವಿಶೇಷ ಅಧಿವೇಶನವನ್ನು ಕರೆಯಿರಿ.

ಶ್ರೀ ಸಿದ್ದರಾಮಯ್ಯ: ಈ ವಿಷಯ ಇಡೀ ರಾಜ್ಯಕ್ಕೆ ಸಂಬಂಧಪಟ್ಟಿದ್ದು, ಇದರ ಬಗ್ಗೆ ದೀರ್ಘವಾದ ಚರ್ಚೆಯಾಗಬೇಕು. ವಿಷದವಾದ ಚರ್ಚೆಯಾಗಿ ಇದಕ್ಕೊಂದು ಪರಿಹಾರವನ್ನು ಕೊಡಬೇಕು.

ಶ್ರೀ ಹೆಚ್.ಡಿ. ರೇವಣ್ಣ: ಹಾಗೆಯೇ ಮಾನ್ಯ ಸಿದ್ದರಾಮಣ್ಣನವರು ಹೇಳಿದ ಹಾಗೆ transformer ಬಗ್ಗೆಯೂ ಚರ್ಚೆಯಾಗಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ: ಎಲ್ಲಾ ವಿಷಯಗಳ ಬಗ್ಗೆ ಚರ್ಚೆಯಾಗಲಿ.

ಶ್ರೀ ಹೆಚ್.ಡಿ. ರೇವಣ್ಣ: ಏಕೆಂದರೆ, ನಿಮಗೆ ಅನುಕೂಲವಾಗಲೆಂದು ನಾನು ಹೇಳುತ್ತಿದ್ದೇನೆ. ಬೇರೆ ಯಾವ ಉದ್ದೇಶವೂ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಮೂರು ದಿನ ಅವಕಾಶ ಕೊಡಿ, ವಿಶೇಷ ಅಧಿವೇಶನ ಮಾಡಲಿ, ಅಲ್ಲಿ ಎಲ್ಲಾ ವಿಚಾರದ ಬಗ್ಗೆ ಉತ್ತರ ಸಿಗುತ್ತದೆ.

ಶ್ರೀ ಸಿದ್ದರಾಮಯ್ಯ: ವಿದ್ಯುಚ್ಛಕ್ತಿಯೇ ಇರುವುದಿಲ್ಲ. Admittedly, we are not in a position to meet the demand. Demand is increasing everyday. Demand ಅನ್ನು meet ಮಾಡುವ ಪರಿಸ್ಥಿತಿಯಲ್ಲಿ ನಾವಿಲ್ಲದಿರುವಾಗ, ನಿರಂತರ ವಿದ್ಯುತ್ ಅನ್ನು ಹೇಗೆ ಕೊಡಲು ಸಾಧ್ಯ?

ಶ್ರೀ ಕೆ.ಎಸ್. ಈಶ್ವರಪ್ಪ: ನಿರಂತರ ವಿದ್ಯುತ್ ಹೇಗೆ ಅನ್ನುವುದನ್ನು ಚರ್ಚೆ ಮಾಡೋಣ. ಏಕೆಂದರೆ, ಹಿಂದೆ ಏಕೆ production ಆಗಲಿಲ್ಲ. ಎಲ್ಲವೂ ಚರ್ಚೆಯಾಗಬೇಕಲ್ಲವೇ? Transformer ಇಲ್ಲವೆಂದು ಹೇಳುತ್ತಿದ್ದೀರಿ. ಅದು ಸತ್ಯ. Transformer ಇಲ್ಲವೆನ್ನುವುದಕ್ಕೆ ಕಾರಣ ಇರಬೇಕಲ್ಲವೇ? ಏನು ಮಾಡಿದ್ದಾರೆ ಎಂಬ ಬಗ್ಗೆ ಪಾರದರ್ಶಕತೆ ಬೇಕು. ಅವೆಲ್ಲವನ್ನೂ ಚರ್ಚೆ ಮಾಡಲು ಮೂರು ದಿನ ಅವಕಾಶ ಮಾಡಿಕೊಡಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈಗ ಅಧಿವೇಶನ 29ರಂದು ಕೊನೆಯಾಗಬೇಕೆಂದು ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಈ ವಿಷಯವನ್ನು ಚರ್ಚೆ ಮಾಡಲು ಒಂದು, ಎರಡು, ಮೂರನೇ ತಾರೀಖಿನವರೆಗೆ ಅವಕಾಶ ಕೊಡಿ.

ಶ್ರೀ ಟಿ.ಬಿ. ಜಯಚಂದ್ರ: ಅಧಿವೇಶನವನ್ನು 31ರವರೆಗೆ ವಿಸ್ತರಿಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ದಿನಾಂಕವನ್ನು ನೋಡಿಕೊಂಡು ನಿಗದಿ ಮಾಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ: ಅಧಿವೇಶವನ್ನು ವಿಸ್ತರಿಸುವ ಬಗ್ಗೆ ನಾವು, ನೀವು ತೀರ್ಮಾನ ತೆಗೆದುಕೊಳ್ಳುವುದಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ಜಯಚಂದ್ರರವರೆ, ದಿನಾಂಕವನ್ನು ಪ್ರತ್ಯೇಕವಾಗಿ ನಿಗದಿ ಮಾಡೋಣ. ನಂತರ ನಿಮ್ಮ ಹತ್ತಿರ ಸಮಾಲೋಚನೆ ಮಾಡಿಕೊಂಡು ದಿನಾಂಕ ನಿಗದಿ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಏಕೆ ವಿದ್ಯುತ್ ಅನ್ನು ಉತ್ಪಾದನೆ ಮಾಡುವುದಕ್ಕಾಗಲಿಲ್ಲ, ಏನು ಕಾರಣ? ನೀವು ಮುಂದೆ ಏನು ಮಾಡುವುದಕ್ಕಾಗುವುದಿಲ್ಲ ಎನ್ನುವುದನ್ನು ನಾವು ಹೇಳಬೇಕಾಗುತ್ತದೆ.

ಅಧ್ಯಕ್ಷರು: ಮಾನ್ಯ ಜಯಚಂದ್ರರವರೆ, ಸಾಕು ಈ ವಿಷಯವನ್ನು ಇಲ್ಲಿಯೇ ಮುಕ್ತಾಯ ಮಾಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ: ನಾನು ಪ್ರಮಾಣಿಕವಾಗಿ ಹೇಳುತ್ತಿದ್ದೇನೆ. ಅದಕ್ಕೋಸ್ಕರ ಮಾನ್ಯ ಸಿದ್ದರಾಮಯ್ಯನವರು ಹೇಳಿದ್ದು ಸರಿ ಇದೆ.

ಶ್ರೀ ಟಿ.ಬಿ. ಜಯಚಂದ್ರ: ನನ್ನ ಕ್ಷೇತ್ರದಲ್ಲಿ 46 transformer ಸುಟ್ಟು ಹೋಗಿದೆ. ಮೂರು ತಿಂಗಳಿನಿಂದ ನಿಮ್ಮಿಂದ ಏನೂ ಮಾಡುವುದಕ್ಕಾಗುತ್ತಿಲ್ಲ. ಇಲ್ಲಿ ನೀವು ಎಷ್ಟು investment ಮಾಡಿದ್ದೀರಿ ಎನ್ನುವುದು ಗೊತ್ತು.

(ಗೊಂದಲ)

ಅಧ್ಯಕ್ಷರು: ಈ ವಿಷಯವನ್ನು ಇಲ್ಲಿಯೇ ಮುಕ್ತಾಯ ಮಾಡುತ್ತಿದ್ದೇನೆ. ಈ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕವನ್ನು ನಿಗದಿ ಮಾಡೋಣ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಗೆ ಅವಕಾಶ ಕೊಡಬೇಕು.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಒಂದೆರೆಡು ಬಿಲ್‌ಗಳಿವೆ. ಅವುಗಳನ್ನು ತೆಗೆದುಕೊಂಡು ನಂತರ ಶೂನ್ಯ ವೇಳೆಗೆ ಅವಕಾಶ ಕೊಡುತ್ತೇನೆ. ಏಕೆಂದರೆ, 5 ಗಂಟೆಯಿಂದ ಬಿಲ್‌ಗಳನ್ನು ತೆಗೆದುಕೊಳ್ಳಬೇಕೆಂದು ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಒಂದೆರೆಡು ಸಣ್ಣ ಬಿಲ್‌ಗಳು, ಅವುಗಳನ್ನು ಮೊದಲು ಮುಗಿಸೋಣ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಮ್ಮ ಶಾಸಕರು ಮಾತನಾಡಬೇಕು. ಎರಡೇ ನಿಮಿಷದಲ್ಲಿ ನಾವು ಮುಗಿಸಿಬಿಡುತ್ತೇವೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ನಾವು ರಾತ್ರಿ ಎಂಟು ಗಂಟೆಯವರೆಗೆ ಅಧಿವೇಶವನ್ನು ನಡೆಸಬೇಕೆಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅವರಿಗೂ, ನಿಮಗೂ ಅವಕಾಶವನ್ನು ಕೊಡುತ್ತೇನೆ. ಶೂನ್ಯ ವೇಳೆಯದ್ದು ನಾಲ್ಕೈದು proposals ಇವೆ. ಒಂದೆರೆಡು ಬಿಲ್ ಆದ ಮೇಲೆ ಇವತ್ತೇ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಎರಡೇ ನಿಮಿಷ ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ಮಾನ್ಯ ಖಮರುಲ್ ಇಸ್ಲಾಂ ಹಾಗೂ ಮಾನ್ಯ ರೇವಣ್ಣನವರಿಗೆ ಅವಕಾಶ ಕೊಡುತ್ತೇನೆ. ಉಳಿದವರಿಗೆ ನಾಳೆ ಅವಕಾಶ ಕೊಡುತ್ತೇನೆ. ಎಲ್ಲಾ ವಿಷಯಗಳು ಶೂನ್ಯ ವೇಳೆಯಲ್ಲಿ ಕೇಳುವುದಕ್ಕೆ ಬರುವುದಿಲ್ಲ. ಬೇರೆ ರೂಪದಲ್ಲಿ